## 58

# ನಿಗೂಢ ಶಕ್ತಿಯ ಸವಾಲು

## (19:8-20)

ಲ್ಯಾಟೀನ ಭಾಷೆಯ ಅಕಲ್ಪಸ್ ಎಂಬ ಪದದಿಂದ ಆಕಲ್ಟ್ (ನಿಗೂಢ) ಅಂದರೆ "ಅಡಗಿರುವ" ಎಂಬ ಅರ್ಥ. ಅಡಗಿರುವ ರಹಸ್ಯಗಳು ಅಥವಾ ಜ್ಞಾನ ಅಕಲ್ಟ್ ಎಂಬ ಪದವನ್ನು, ಪದ ಸಂಗ್ರಹದ ಅರ್ಥ ನೀಡುವ ಪುಸ್ತಕವು ಈ ಕೆಳಕಂಡಂತೆ ವಿವರಿಸುತ್ತದೆ:

1. ಅಲೌಕಿಕ, ಪ್ರಾಬಲ್ಯ ಶಕ್ತಿ ಪರಿಣಾಮ ಉಂಟು ಮಾಡುವ ಶಕ್ತಿ ಅಥವಾ ಇಂದ್ರಿಯ ಗೋಚರ ಸ್ವಭಾವದ ಶಕ್ತಿಗಳೊಂದಿಗೆ ಒಡನಾಟ.
2. ಮಾನವನು ಗ್ರಹಿಸಲಾರದ ಗ್ರಹಣ ಶಕ್ತಿ; ಬೇಧಿಸಲಾಗದ.
3. ಅದನ್ನು ಬಯಸುವವರಿಗೆ ಮಾತ್ರ ದೊರಕುವ ರಹಸ್ಯ.[1]

ಧರ್ಮೋಪದೇಶಕಾಂಡ 18:9-14 ವಾಕ್ಯ ಭಾಗದಿಂದ, ಈ ನಿಗೂಢ ಶಕ್ತಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು: (1) ಶಕುನ ಹೇಳುವದು (ಭವಿಷ್ಯ ಹೇಳುವದು); (2) ಮಾಟ (ಕೆಟ್ಟದ್ದನ್ನು ಬಯಸುವದು); ಮತ್ತು (3) ಸತ್ತವರ ಸಂಗಡ ಸಂಪರ್ಕ ಇವೆಲ್ಲ ವುಗಳನ್ನು ದೇವರು ಖಂಡಿಸುತ್ತಾನೆ (ವಿಮೋಚನಕಾಂಡ 22:18; ಯಾಜಕಕಾಂಡ 19:31; 20:6, 27; ಯೆಶಾಯ 47:13, 14). *ಫಾರ್‌ಚಾನ್ ಸೆಲಸ್ಲ* ಎಂಬ ಪುಸ್ತಕದಲ್ಲಿ ಗ್ಯಾರಿ ವಿಲ್‌ಬರ್ನ್‌ರವರು 20ನೇ ಶತಮಾನಕ್ಕೆ ಸಂಬಂಧ ಪಟ್ಟಂತೆ ಈ ನಿಗೂಢ ಕಾರ್ಯಗಳ ಕುರಿತು ಮೂರು ಅಂಶಗಳನ್ನು ತೋರಿಸಿರುವರು: (1) ಭವಿಷ್ಯ ನುಡಿ (ಜೋತಿಷ್ಯ ಶಾಸ್ತ್ರ, ಹಸ್ತ ರೇಖೆ, ಕಾರ್ಡುಗಳು, ಹಾಗೂ ಭೌತಶಾಸ್ತ್ರ ಒಳಗೊಂಡಿರುತ್ತದೆ); (2) ಮೋಡಿ (ಕಣಿ, ಮಂತ್ರ, ಸಾತಾನಿ ಪವೃತ್ತಿ); ಮತ್ತು (3) ಸತ್ತವರ ಸಂಗಡ ಸಂಪರ್ಕ (ಈಡೇರಿಸುವ ಕಾರ್ಯ, ಸಂಖ್ಯೆಗಳಿರುವ ಹಲಗೆ),[2] ಇವೆಲ್ಲವನ್ನು ದೇವರು ಸಂಪೂರ್ಣವಾಗಿ ನಿರಾಕರಿಸಿದ್ದರೂ, ಹೊಸ ಒಡಂಬಡಿಕೆಯ ಕಾಲದಲ್ಲಿದ್ದಂತೆ, ಈಗಲೂ, ಅವುಗಳು ವೃದ್ಧಿಗೊಂಡಿವೆ.

ಪೌಲನ ದಿವಸಗಳಲ್ಲಿ ಎಫೆಸವು ಈ ನಿಗೂಢ ಕಾರ್ಯಗಳನ್ನು ಮಾಡುವ ಪಂಥಗಳಿಂದ ತುಂಬಿತ್ತು. ಅಥೇನ ಜನರ ಜೀವನ ಶೈಲಿಯ ಇದು ಜ್ಞಾನದ ಸುತ್ತಲೂ ಆವರಿಸಿತ್ತು. ಕೊರಿಂಥದವರು ಅನೈತಿಕ ಜೀವನವನ್ನು ಜೀವಿಸುವಾಗ, ಎಫೆಸದವರು ಮಾಂತ್ರಿಕರಿಂದಲೂ, ತುಂಬಿದರು. ಎಫೆಸದವರು ಕಣಿ ಹೇಳುವವರನ್ನು ಜ್ಯೋತಿಷಿಗಳನ್ನು ಶಕುನ ಹೇಳುವವರನ್ನು, ಹಾಗೂ ಭವಿಷ್ಯ ನುಡಿಯುವವರನ್ನು ತುಂಬಿಕೊಂಡಿದ್ದರು. ಎಫೆಸದಲ್ಲಿ ಮಾನಸಿಕ ಹಾಗೂ ನೈತಿಕ ಸಮಸ್ಯೆಗಳು ಹೆಚ್ಚಾಗಿ ಇಲ್ಲದಿದ್ದರೂ, ನಿಗೂಢ ಶಕ್ತಿಗಳನ್ನು ಮಾತ್ರ ಅತಿಯಾಗಿ ಹೊಂದಿದ್ದರು.

ಕೊರಿಂಥದವರ ದಿವಸಗಳಲ್ಲಿ "ಕೊರಿಂಥನೈಜ್" ಎಂಬ ಭಾಷೆಯನ್ನು ಬಳಸುತ್ತಿದ್ದರು (ಅವರು ನೈತಿಕವಾದ ಹಾದರ). ಅದೇ ರೀತಿಯಲ್ಲಿ, ಎಫೆಸದವರು ಸಹ ಭಾಷಾಜ್ಞಾನವನ್ನು ಹೊಂದಿದ್ದರು: ಮೋಡಿಯ ಮಾಟ ಹಾಗೂ ಮಂತ್ರವನ್ನು ಎಫೆಸದವರು, "ಎಫೆಸದ ಪತ್ರಗಳು" ಎಂದು ಕರೆಯುತ್ತಿದ್ದರು ಶತಮಾನಗಳ ನಂತರ ಶೇಕ್ಸ್‌ಫಿಯರ್‌ನು ಎಫೆಸದವರನ್ನು ಕುರಿತು ಈ ಕೆಳಕಂಡ ಪದ ಪ್ರಯೋಗ ಮಾಡಿರುವನು:

> ಆ ಪಟ್ಟಣವು ಹರಟೆಯಿಂದ ತುಂಬಿತ್ತು,[3]

ಕಣ್ಣುಗಳನ್ನು ಮೋಸಪಡಿಸುವ ಜನರಿಂದ ತುಂಬಿತ್ತು.[4]
ಕತ್ತಲ ರಹಸ್ಯವಾದ ಮಾಟ ಮಂತ್ರಗಳನ್ನು ಮಾಡುವವರು ಜನರ ಮನಸ್ಸನ್ನು ಕೆಡಿಸಿದ್ದರು
ಆತ್ಮಗಳನ್ನು - ಕೊಲ್ಲುವ ಮಾಂತ್ರಿಕ ಸ್ತ್ರೀಯರು ದೇಹಗಳನ್ನು ವಕ್ರ ಮಾಡುತ್ತಿದ್ದರು
ಅಡಗಿಕೊಂಡ ಮೋಸಗಾರರು, ಅವಿವೇಕವಾಗಿ ಮಾತನಾಡುವರು,
ಅವರುಗಳು ಇಂಥಹ ಪಾಪವನ್ನು ಪ್ರಬೋಧಿಸುತ್ತಿದ್ದರು.[5]

ಎಫೆಸದವರ ಈ ಕೃತ್ಯದ ಬಗ್ಗೆ ಲೌಕಿಕ ಮೂಲಗಳಿಂದಲೂ ಮಾಹಿತಿ ಇರುವದಿಲ್ಲ. ವಾಕ್ಯಗಳ ಮೂಲಕವಾಗಿಯೇ, ಅವರ ದುರಾತ್ಮ ಪ್ರಪಂಚದ ಮಾಹಿತಿಯನ್ನು ಪಡೆಯುವ ಸಾಧ್ಯತೆಯಿದೆ. ಅಪೊಸ್ತಲರ ಕೃತ್ಯಗಳು 19:19 ಪೌಲನ ಎಫೆಸದ ಸೇವಾ ಅವಧಿಯಲ್ಲಿ, "ಇದಲ್ಲದೆ ಮಾಟ ಮಂತ್ರಗಳನ್ನು ನಡಿಸಿದವರಲ್ಲಿ ಅನೇಕರು ತಮ್ಮ ಪುಸ್ತಕಗಳನ್ನು ತಂದು ಕೂಡಿಸಿ ಎಲ್ಲರ ಮುಂದೆ ಸುಟ್ಟುಬಿಟ್ಟರು; ಅವುಗಳ ಕ್ರಯವನ್ನು ಲೆಕ್ಕಮಾಡಿ ಐವತ್ತು ಸಾವಿರ ಬೆಳ್ಳಿ ನಾಣ್ಯ ಆಯಿತೆಂದು ತಿಳಿದುಕೊಂಡರು." ಈಗಿನ ಕ್ರಯಕ್ಕಿಂತಲು, ಅದು ಆಗಿನ ದಿನದಲ್ಲಿ ಕಡಿಮೆ ಕ್ರಯವುಳ್ಳದ್ದಾಗಿತ್ತು. ನೂರಾರು, ಅಥವಾ ಸಾವಿರಾರು ಮಾಟಮಂತ್ರ ಮೋಡಿ ಹಾಗೂ ಶಾಪದಿಂದ ತುಂಬಿದ್ದ ಪುಸ್ತಕಗಳನ್ನು ಅವರು ಸುಟ್ಟುಹಾಕಿರಬಹುದು.

ಈ ಕಥೆಯಲ್ಲಿ, ಪೌಲನ ಎಫೆಸದ ಮೂರು ವರ್ಷಗಳ ಕಾಲದ ಪಾಠವನ್ನು ಮುಂದುವರಿಸುತ್ತೇವೆ, ಜನರ ಮನಸ್ಸಿನಲ್ಲಿ ಅಡಗಿದ್ದ ಕತ್ತಲು ಹಾಗೂ ಅಲೌಕಿಕ ಶಕ್ತಿಗಳನ್ನು ದೇವರು ಹೇಗೆ ತೆಗೆದು ಹಾಕಿದನು ಎಂದು ಕಲಿಯುತ್ತೇವೆ.

## ಒಂದು ಹಳೆಯದಾದ ಸವಾಲು (19:8-10)

ಈ ನಿಗೂಢ ಪಂಥಗಳ ವಿಚಾರಗಳನ್ನು ಅರಿಯುವ ಮೊದಲು, ಪೌಲನು ಒಂದು ಹಳೆಯದಾದ ಸವಾಲನ್ನು ಯಾವ ರೀತಿ ಎದುರಿಸಿದನು, ಮತ್ತು ತನ್ನ ಜನರಿಗೆ ಯಾವ ವಿಧದಲ್ಲಿ ಬೋಧಿಸಿದನೆಂದು ತಿಳಿಯಬೇಕು.

ಪೌಲನ ಎರಡನೆಯ ಪ್ರಯಾಣದ ಅಂತ್ಯದಲ್ಲಿ, ಅವನು ಎಫೆಸದಲ್ಲಿ ಕೆಲಕಾಲ ತಂಗಿದ್ದನು. ಅವನು ಸಭಾಮಂದಿರದಲ್ಲಿ ಉಪದೇಶಿಸಿದಾಗ, ಅಲ್ಲಿ ಅವನು ಸ್ವಲ್ಪಕಾಲ ತಂಗಬೇಕಿತ್ತು ಎಂದು ಎಫೆಸದವರು ಮನವಿ ಮಾಡಿದ್ದರು. "ಆದರೆ ಅವನು ಸ್ವಲ್ಪಕಾಲ ತಂಗಬೇಕೆಂದು ಎಫೆಸದವರು ಮನವಿ ಮಾಡಿದ್ದಾಗ್ಯೂ, ಆದರೆ ಅವನು ಅಲ್ಲಿಂದ ಹೊರಡಲೇಬೇಕೆಂದು ತಿಳಿಸಿ, ದೇವರ ಚಿತ್ತವಾದರೆ ತಿರಿಗಿ ನಿಮ್ಮ ಬಳಿಗೆ ಹಿಂದಿರುಗುವೆನು ಎಂದು ಹೇಳಿದ್ದನು (18:19-21). ಈಗ ಅವನು ತನ್ನ ವಾಗ್ದಾನವನ್ನು ಈಡೇರಿಸಿದ್ದನು. ಆ ಪಟ್ಟಣದಲ್ಲಿ, ಪೌಲನು ಸಭಾಮಂದಿರದೊಳಗೆ ಹೋಗಿ ಮೂರು ತಿಂಗಳು ಅಲ್ಲೆ ದೇವರ ರಾಜ್ಯದ ವಿಷಯಗಳನ್ನು ಕುರಿತು ವಾದಿಸುತ್ತಾ ಜನರನ್ನು ಒಡಂಬಡಿಸುತ್ತಾ ಧೈರ್ಯದಿಂದ ಮಾತಾಡಿದನು (19:8). ಯಾವುದೇ ಅಭ್ಯಾಂತರವಿಲ್ಲದೆ, ಹೊಡೆತಗಳಿಲ್ಲದೆ ಸಭಾ ಮಂದಿರದಲ್ಲಿ ಪೌಲನನ್ನು ಮಾತಾಡಲು ಅನೋಮೋದನೆ ಮಾಡಿದ್ದು, ಪೌಲನಿಗೆ ಅದು ದಾಖಲೆಯಾಯಿತು![6] ಅವನು ತನ್ನ ಮೊದಲ ಸಂದರ್ಶನದಲ್ಲಿ, ಎಫೆಸದ ಜನರ ಮೇಲೆ ಪ್ರಭಾವ ಬೀರಿದ್ದ ಕಾರಣದಿಂದ, ಈಗ ಅವನು ಅಲ್ಲಿ ಹೆಚ್ಚಿನ ಸಮಯವನ್ನು ಕಳೆಯಲು ಸಾಧ್ಯತೆ ಉಂಟಾಯಿತು.[7]

ಪೌಲನು, ಸಭಾಮಂದಿರದ ಪ್ರಸಂಗದಲ್ಲಿ ಜನರನ್ನು ಒಡಂಬಡಿಸುತ್ತಾ ಧೈರ್ಯದಿಂದ ಮಾತಾಡಿದನು (ವಚನ 8ಬಿ). "ದೇವರ ರಾಜ್ಯದ ವಿಷಯಗಳು" ಅಂದರೆ ಮೆಸ್ಸೀಯ ಮತ್ತು ಅವನ ರಾಜ್ಯದ ಕುರಿತ ಇನ್ನೊಂದು ಮಾರ್ಗ ಎಂಬದೇ (ನೋಡಿರಿ 28:31). ಪೌಲನು ಜನರಿಗೆ ಸಭೆಯ ಹಾಗೂ ಆತನ ಜನರ ಕುರಿತು ಪ್ರಸಂಗಿಸಿದನು.[8]

ಪೌಲನನ್ನು ಸಭಾಮಂದಿದಲ್ಲಿ ಮೊದಲಿಗೆ ಉತ್ತಮವಾದ ಪ್ರತಿಕ್ರಿಯೆಯನ್ನೇ ಹೊಂದಿದನು

ಮತ್ತು ಅದರ ಅಂತಿಮ ಪರಿಣಾಮವು ಒಂದೇ ಆಗಿತ್ತು.[9] ಕೆಲವರು ತಮ್ಮ ಮನಸ್ಸುಗಳನ್ನು ಕಠಿಣಮಾಡಿಕೊಂಡು ಒಡಂಬಡದೇ ಗುಂಪುಕೂಡಿದ್ದ[10] ಜನರ ಮುಂದೆ ಈ ಮಾರ್ಗವು ಕೆಟ್ಟದ್ದು ಎಂದು ಹೇಳಿದರು (19:9ಎ). ಈ "ಮಾರ್ಗ" ಎಂಬ ವ್ಯಾಖ್ಯಾನದಲ್ಲಿ ಕ್ರೈಸ್ತರು ಮತ್ತು (ಯೇಸು ಹೇಳಿದ "ನಾನೇ ಮಾರ್ಗ") ಎಂಬುದು ಅಡಕ ವಾಗಿದೆ (ಯೋಹಾನ 14:6; ಒತ್ತಿ ಹೇಳಿದ್ದು ನನ್ನದು). ಅವಿಶ್ವಾಸವಿದ್ದ ಯೆಹೂದ್ಯರು ಸಾರ್ವಜನಿಕವಾಗಿ ಯೇಸುವಿನ ಕುರಿತು ಸುಳ್ಳು ಸಾಕ್ಷಿ ಹೇಳಿದಾಗ, ಸಭಾಮಂದಿರವನ್ನು ಬಿಟ್ಟು ಹೋಗುವ ಸಮಯ ಬಂತು ಎಂದು ಪೌಲನು ತಿಳಿದನು (ನೋಡಿರಿ ಮತ್ತಾಯ 7:6). ಆದ್ದರಿಂದ ಅವನು ಅವರನ್ನು ಬಿಟ್ಟು ಹೋಗಿ ಶಿಷ್ಯರನ್ನು ಬೇರೆ ಮಾಡಿದನು (ಅಪೊಸ್ತರ ಕೃತ್ಯಗಳು 19:9ಬಿ) - ಅಂದರೆ ಯೇಸುವನ್ನು ಹಾಗೂ ಆತನ ರಾಜ್ಯವನ್ನು ಅಂಗೀಕರಿಸಿದವರನ್ನು ಪ್ರತ್ಯೇಕ ಮಾಡಿದನು ಎಂಬ ಅರ್ಥ.

ಫಿಲಿಪ್ಪಿಯಲ್ಲಿ, ಪೌಲನು ನದಿ ತೀರದಲ್ಲಿ ಉಪದೇಶಮಾಡಿದ್ದನು; ಅಥೇನೆಯ ಅಗೋರ ಮತ್ತು ಅರಿಯೊಪಾಗದಲ್ಲಿ ಉಪದೇಶಮಾಡಿದ್ದನು. ಕೊರಿಂಥದಲ್ಲಿ ಯುಸ್ತ ತೀತನ ಖಾಸಗಿ ಕೊಠಡಿಯಲ್ಲಿ ಉಪದೇಶಮಾಡಿದನು. "ಎಫೆಸದಲ್ಲಿ, ಪೌಲನು[11] ತುರನ್ನನ ತರ್ಕ ಶಾಲೆಯಲ್ಲಿ[12] ಪ್ರತಿದಿನವೂ ವಾದಿಸಿದನು" (ವಚನ 9ಸಿ). ತುರನ್ನನು ಎಂಬ ಮನುಷ್ಯನು (ಅವನ ಹೆಚ್ಚಿನ ಮಾಹಿತಿ ಇಲ್ಲ) ಒಂದು ಶಾಲೆಯನ್ನು ತೆರೆದು, ಅದನ್ನು ಪೌಲನಿಗೆ ಬಾಡಿಗೆಗೆ ನೀಡಿದ್ದನು.[13] "ತುರನ್ನನು" ಅಂದರೆ ಲ್ಯಾಟಿನ್ ಭಾಷೆಯ "ಪೀಡಕ್" ಎಂಬ ಅರ್ಥ ಒಂದು ವೇಳೆ ತುರನ್ನನು ತನ್ನ ಶಾಲೆಯಲ್ಲಿ ತಾನೇ ಪ್ರಬೋಧಿಸುವವನಾಗಿದ್ದರೆ, ಒಂದು ವೇಳೆ ಅವನ ವಿದ್ಯಾರ್ಥಿಗಳು ಅವನಿಗೆ ಈ ಅಡ್ಡ ಹೆಸರನ್ನು ನೀಡಿರಬಹುದು![14]

ಪೌಲನ ಬೋಧನೆಯ ಬಗ್ಗೆ ವೆಸ್ಟರ್ನ್ ಟೆಕ್ಸ್‌ನಲ್ಲಿ "ಪೌಲನು ಪ್ರತಿದಿನ 5 ಗಂಟೆಯಿಂದ 10 ಗಂಟೆಯವರೆಗೆ ಬೋಧಿಸಿದನು ಎಂಬುದಾಗಿದೆ."[15] ಬೆಳ್ಳಿಗೆ 11ರಿಂದ ಸಾಯಂಕಾಲ 4ರವರೆಗೆ ಬೋಧಿಸಿರಬಹುದು. ಪ್ರಪಂಚದ ಜನರು ಆ ಸಮಯದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದರು.[16] 7ರಿಂದ 11ರವರೆಗೆ ಕೆಲಸದ ಸಮಯ ನಂತರ 4ರಿಂದ ರಾತ್ರಿ 9:30ರವರೆ ಮಧ್ಯಾಹ್ನದ ವಿರಾಮದ 5 ಗಂಟೆ ಅವಧಿಯಲ್ಲಿ, ಇತರರು ವಿಶ್ರಾಂತಿ ಪಡೆಯು ವಾಗ, ಆ ಕೊಠಡಿಯು ಖಾಲಿಯಾಗಿರುತ್ತಿತು, ಆ ಸಮಯದಲ್ಲಿಯೇ ಪೌಲನು ಕ್ರಿಸ್ತನ ಕುರಿತು ಉಪದೇಶಿಸಿದನು.

ನಂತರ, ಎಫೆಸದಲ್ಲಿ ಪೌಲನು ತನಗಾಗಿ ಮತ್ತು ತನ್ನ ಸಂಗಡಿಗರಿಗಾಗಿ ಕೈಯಾರೆ ದುಡಿದನು ಎಂದು ನೋಡುತ್ತೇವೆ (20:34). ಬಹಿರಂಗ ಬೋಧನೆಯ ಸಂಗಡ, ಪೌಲನು ಮನೆ ಮನೆಗಳಿಗೆ ಹೋಗಿ ಉಪದೇಶಿಸಿದನು (ವಚನ 20) - ಹಗಲಿನಲ್ಲಿ ಮಾತ್ರವಲ್ಲದೆ, ರಾತ್ರಿಯಲ್ಲಿಯೂ ಬೋಧಿಸಿದನು (ವಚನ 31). ಪೌಲನ ದಿನಚರಿಯು: ಬೆಳಗ್ಗೆ 7ರಿಂದ 11 ರವರೆಗೆ, ಗುಡಾರ ನೇಯುತ್ತಿದ್ದನು (ಬಹುಶಃ ಅಕ್ವಿಲ ಮತ್ತು ಪ್ರಿಸ್ಕಿಲರ ಅಂಗಡಿಯಲ್ಲಿ); ಬೆಳಗ್ಗೆ 11ರಿಂದ ಸಾಯಂಕಾಲ 4ರವರೆಗೆ ತುರನ್ನನ ಶಾಲೆಯಲ್ಲಿ ಉಪದೇಶಿಸುತ್ತಿರಬಹುದು; 4ರಿಂದ 9:30 ರವರೆಗೆ, ಅವನು ಹೆಚ್ಚಿನ ಗುಡಾರವನ್ನು ತಯಾರಿಸಿರಬಹುದು; 9:30ರಿಂದ ರಾತ್ರಿ 12ರವರೆಗೆ ಮನೆಗಳಲ್ಲಿ ಬೋಧಿಸಿರಬಹುದು. ಅವನು ಉಪದೇಶವನ್ನು ಪ್ರೀತಿಸಿದನು ಎಂಬುದು ಇದರಿಂದ ರುಜುವಾತಾಗುತ್ತದೆ!

ತುರನ್ನನ ಶಾಲೆಯಲ್ಲಿ ಪೌಲನು ಬೋಧಿಸಿದ ಸಮಯವು, ಸಹ ಆ ಸ್ಥಳದ ಜನರ ಕುರಿತಾಗಿ ಒಂದು ವಿಚಾರವನ್ನು ತಿಳಿಸುತ್ತದೆ. ವಾಕ್ಯವನ್ನು ಕಲಿಯುವದನ್ನು ಅವರು ಪ್ರೀತಿ ಸುತ್ತಿದ್ದರು ಅವರ ಸ್ನೇಹಿತರು ಹಾಗೂ ನೆರಹೊರೆಯವರು ವಿಶ್ರಾಂತಿ ಪಡೆಯವಾಗ ಈ ಜನರು ವಾಕ್ಯ ಕೇಳುತ್ತಿದ್ದರು! ಒಂದು ವೇಳೆ ನಾವು ಎಫೆಸದವರಾಗಿದ್ದರೆ, ವಾಕ್ಯವನ್ನು ಆಸಕ್ತಿಯಿಂದ ಕೇಳುತ್ತಿದ್ದೇವೋ? ನಾವು ಈಗ ಇರುವಂಥ ಸ್ಥಳದಲ್ಲಿ ಅವರಷ್ಟು ಕಲಿಯಲು ಆಸಕ್ತಿವುಳ್ಳವ ರಾಗಿದ್ದೇವೋ?

ವಚನ 10ರಲ್ಲಿ, "ಇದು ಎರಡು ವರುಷ ಮೂರು ತಿಂಗಳು ನಡೆದಿದ್ದರಿಂದ, ಆಸ್ಯ

ಸೀಮೆಯಲ್ಲಿ ವಾಸವಾಗಿದ್ದ ಯೆಹೂದ್ಯರು, ಗ್ರಿಕರೂ ಎಲ್ಲರೂ ವಾಕ್ಯವನ್ನು ಕೇಳಿದರು'' (ವಚನ 8), ಪೌಲನು ಸಭಾಮಂದಿರದಲ್ಲೂ ಉಪದೇಶ ಮಾಡಿದ್ದನು. 22ನೇ ವಚನದಲ್ಲಿ ಪೂರ್ಣ ಮೂರು ವರುಷ ಎಂಬುದಾಗಿದೆ (20:31). ಅದನ್ನು ಪೌಲನು ನಂತರ ತಿಳಿಸಿರುವನು. ಪೌಲನ ಪ್ರಯಾಣಗಳಲ್ಲಿ, ಅವನು ಹೆಚ್ಚಾದ ಸಮಯವನ್ನು ಈ ಸ್ಥಳದಲ್ಲಿ ಕಳೆದಿದ್ದನು. ಅವನಿಗೆ ಎಫೆಸದಲ್ಲಿ ನಿರ್ದಿಷ್ಟವಾದ ಅವಕಾಶವು ದೊರೆತ್ತಿತ್ತು (1 ಕೊರಿಂಥ 16:9).

ಪೌಲನ ಈ ಪ್ರಯತ್ನದ ಫಲವಾಗಿ, ವಾಕ್ಯವು ಎಫೆಸದಲ್ಲಿ ಮಾತ್ರವಲ್ಲದೆ ಆಸ್ಯ ಸೀಮೆಯ ರೋಮಾ ಪ್ರಾಂತಕ್ಕೂ ಪ್ರಚಾರವಾಯಿತು, "ಆದ್ದರಿಂದ ಆಸ್ಯ ಸೀಮೆಯಿಯಲ್ಲಿ ವಾಸವಾಗದ್ದ ಯೆಹೂದ್ಯರೂ, ಗ್ರೀಕರೂ ಎಲ್ಲರೂ ವಾಕ್ಯವನ್ನು ಕೇಳಿದರು'' (ಅಪೊಸ್ತಲರ ಕೃತ್ಯಗಳು 19:10ಬಿ). ನಂತರ ಪೌಲನ ವಿರೋಧಿಗಳು, "ಎಫೆಸದಲ್ಲಿ ಮಾತ್ರವಲ್ಲದೆ ಸ್ವಲ್ಪ ಕಡಿಮೆ ಆಸ್ಯ ಸೀಮೆಯಲ್ಲೆಲ್ಲಾ ಬಹಳ ಜನರನ್ನು ಒಡಂಬಡಿಸಿ ತಿರುಗಿಸಿಬಿಟ್ಟಿದ್ದಾನೆ ...'' ಎಂದು ಹೇಳಿದರು (ವಚನ 26). ಕೆಲವು ಅಥವಾ ಆಸ್ಯ ಸೀಮೆಯ ಸಕಲ "ಏಳು ಸಭೆಗಳು'' (ಪ್ರಕಟನೆ 1:11). ಈ ಸಮಯದಲ್ಲಿಯೇ ಸ್ಥಾಪನೆಗೊಂಡಿರಬಹುದು, ಹಾಗೂ ಕೊಲೊಸ್ಸೆ ಮತ್ತು ಹಿರಿಯಾ ಪೋಲಿಯದಲ್ಲಿಯೂ ಸಭೆಗಳ ಸ್ಥಾಪನೆಯನ್ನು ಕಾಣಬಹುದು (ಕೊಲೊಸ್ಸೆ 1:2; 4:13).[17]

ಪೌಲನು ಸುವಾರ್ತೆಯ ಕೆಲಸವನ್ನು ತಾನೊಬ್ಬನೇ ಮಾಡಲಿಲ್ಲ. ಒಬ್ಬ ವಿವೇಕಿಯಾದ ನಾಯಕನು ಇತರರನ್ನು ತರಬೇತಿಗೊಳಿಸಿ ಅವರನ್ನು ಪ್ರೋತ್ಸಾಯಿಸಿ ತನ್ನನ್ನು ಅಭಿವೃದ್ಧಿ ಪಡಿಸಿ ಕೊಳ್ಳುವನು. ಈ ಹಿಂದೆ, ಎಫೆಸದ ಸೇವೆಯಲ್ಲಿ ತಿಮೊಥಿ ಹಾಗೂ ತೀತರು ಇದ್ದರು ಎಂದು ತಿಳಿದಿದ್ದೇವೆ. ಎರಸ್ತನು ಎಂಬ ಸಹೋದರನು ಪೌಲನೊಂದಿಗೆ ಸೇವೆ ಮಾಡುತ್ತಿದ್ದನು (ಅಪೊಸ್ತಲರ ಕೃತ್ಯಗಳು 19:22), ಹಾಗೂ ಸೊಸ್ತೇನೆನೆಂಬ ಕ್ರೈಸ್ತನು ಇದ್ದನು (1 ಕೊರಿಂಥ 1:1, 2). ಹಾಗೂ ಕೊಲೊಸ್ಸೆಯ ಇಬ್ಬರು ಸಹೋದರನಾದ, ಎಫಪ್ರ ಹಾಗೂ ಅರ್ಕಿಪ್ಪನೂ ಇದ್ದರು. ಸಹಜವಾಗಿ ಅವರು ಪೌಲನಿಂದ ತರಬೇತಿ ಪಡೆದಿರಬಹುದು, ಮತ್ತು ಅವನಿಂದ ಸೇವೆಗೆ ಸಮರ್ಪಣೆಗೊಂಡಿರಬಹುದು (ಕೊಲೊಸ್ಸೆ 1:7, 8; 4:12, 13, 17; ಫಿಲೆಮೋನ 2, 23). ಪ್ರಯಾಣದಲ್ಲಿ ಪೌಲನಿಗೆ ಜೊತೆಯವರಾಗಿದ್ದ ಮೆಕೆದೋನ್ಯದ ಗಾಯನೂ, ಅರಿಸ್ತಾರ್ಕನೂ ಇರಬಹುದು (ಅಪೊಸ್ತಲರ ಕೃತ್ಯಗಳು 19:29) ಅವರೂ ಸಹ ಪೌಲನ ಸಂಗಡ ಆಸ್ಯ ಸೀಮೆಯಲ್ಲಿ ಕೆಲಸ ಮಾಡಿರಬಹುದು - ಹಾಗೂ ಪೌಲನ ಸೌವಾರ್ತಿಕ ಸ್ನೇಹಿತರಾದ ಅಕ್ವಿಲ ಹಾಗೂ ಪ್ರೀಸ್ಕಿಲ್ಲರನ್ನು ಮರೆಯಬಾರದು (18:18, 19, 26).[18]

ಪೌಲನು ಎಫೆಸದಲ್ಲಿ ಬಹಳವಾಗಿ ಬಹಿರಂಗ ಸಭೆಯನ್ನು ನಡೆಸಿದ್ದನು. ತುರನ್ನನ ಶಾಲೆಯಲ್ಲಿ ದೇವರ ವಾಕ್ಯವನ್ನು ಉಪದೇಶಿಸಿದ್ದನು (ಅಪೊಸ್ತಲರ ಕೃತ್ಯಗಳು 19:9, 10). ಆ ಪ್ರಾಂತ್ಯದಿಂದ ಬಂದಿದ್ದ ಅನೇಕ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದ್ದನು. ನಂತರ ಅವರುಗಳು ದೇವರ ವಾಕ್ಯವನ್ನು ತಮ್ಮ ಊರುಗಳಿಗೆ ತೆಗೆದುಕೊಂಡು ಹೋದರು. ಪೌಲನು ವ್ಯಕ್ತಿಗತವಾಗಿ ಕೊಲೊಸ್ಸೆ, ಲವೋದೊಕ್ಯ ಹಾಗೂ ಇತರೆ ಪಟ್ಟಣ ಗಳನ್ನು ಸಂದಿಸಿರಲಿಲ್ಲ (ಹಿರಿಯಾ ಪೊಲಿಯವನ್ನು ಸಂದಿಸಿರಲಿಲ್ಲ) (ಕೊಲೊಸ್ಸೆ 2:1). ಪ್ರಾಯಶಃ ಎಪಫ್ರನು ಲವೋದಿಕಿಯಕ್ಕೂ ಹಾಗೂ ಹಿರಿಯಾಪೊಲಿಯಕ್ಕೂ ಸುವಾರ್ತೆಯನ್ನು ತೆಗೆದುಕೊಂಡು ಹೋಗಿರಬಹುದು[19] (ಕೊಲೊಸ್ಸೆ 1:7, 8; 4:12, 13).

ಪೌಲ ಮತ್ತು ಅವನ ಸಂಗಡಿಗರಲ್ಲಿದ್ದ, ಆಸಕ್ತಿ ನಮ್ಮಲ್ಲಿರುವವರಿಗೂ ಇರಬೇಕೆಂದು ನಾನು ಬಯಸುತ್ತೇನೆ! ಆದ್ದರಿಂದ ನಮ್ಮ ಸುತ್ತಲ್ಲಿರುವ ಪ್ರತಿಯೊಬ್ಬರೂ ವಾಕ್ಯವನ್ನು ಕೇಳಬಹುದಲ್ಲವೇ!

## ಒಂದು ಹೊಸದಾದ ಸವಾಲು (19:11-20)

ಪೌಲನು, ಎಫೆಸದಲ್ಲಿ ಎದುರಿಸಿದ ಒಂದು ಹೊಸ ಸವಾಲಿನ ಕುರಿತು ಈಗ ನಾವು ಕಲಿಯುತ್ತೇವೆ, ಈ ಹಿಂದೆ ಪೌಲನು ಕಣೀ ಹೇಳುವವರನ್ನು ಎದುರಿಸಿದ್ದನು. ಈಗ ನಿಗೂಢ

ಪಂಥದವರನ್ನು ಎದುರಿಸಿದನು (13:6-11) ಮತ್ತು ಕಣೀ ಹೇಳುವ ಸ್ತ್ರೀಯನ್ನು ಎದುರಿಸಿದ್ದನು (16:16-18), ಆದರೆ ಎಫೆಸದಲ್ಲಿದ್ದಂಥ ಅಲೌಕಿಕ ಹಾಗೂ ನಿಗೂಢವಾದ ಶಕ್ತಿಗಳನ್ನು ಇದುವರೆಗೆ ಎದುರಿಸಲಿರಲಿಲ್ಲ.

**ಪೌಲನು ಅಧಿಕ ಶಕ್ತಿಯನ್ನು ಹೊಂದಿದ್ದನು**

ದೇವರು ಒಬ್ಬನಿಗೆ ಒಂದು ಕೆಲಸವನ್ನು ನೀಡುವಾಗ, ಆ ಕೆಲಸದ ಸಕಲ ಅಗತ್ಯತೆಗಳನ್ನು ಸಹ ನೀಡುವನು. ದೇವರು ಈಗಾಗಲೇ ಪೌಲನ ಮೂಲಕ ಅದ್ಭುತ ಕಾರ್ಯಗಳನ್ನು ಮಾಡಿದ್ದನು (14:8-10; ನೋಡಿರಿ 2 ಕೊರಿಂಥ 12:12), ಆದರೆ ಈಗ ಪೌಲನು ನಿಗೂಢ ಹಾಗೂ ಮೋಡಿ ಮಾಡುವ ಶಕ್ತಿಗಳಿಂದ ತುಂಬಿದ್ದ ಎಫೆಸದವರನ್ನು ಎದುರಿಸಲು ದೇವರು ಅವನಿಗೆ ಅತಿಶಯವಾದ ಶಕ್ತಿಯನ್ನು ನೀಡಿದನು: "ದೇವರು ಪೌಲನ ಕೈಯಿಂದ *ವಿಶೇಷವಾದ* ಮಹತ್ಕಾರ್ಯಗಳನ್ನು ನಡಿಸುತ್ತಾ ಇದ್ದನು" (ಅಪೊಸ್ತಲರ ಕೃತ್ಯಗಳು 19:11; ಒತ್ತಿ ಹೇಳಿದ್ದು ನನ್ನದು). ಎಲ್ಲವೂ ಅದ್ಭುತವಾದ ಮಹತ್ಕಾರ್ಯಗಳಾದರೂ, ಇದು ಅತಿ *ಅದ್ಭುತವಾದ* ಮಹತ್ಕಾರ್ಯವಾಗಿತ್ತು.

ಆ ಮಹಾತ್ಕಾರ್ಯಗಳು ಕೇವಲ ಸಾಧಾರಣವಾದ ಕಾರ್ಯಗಳಾಗಿರದೇ: "ಜನರು ಅವನ ಮೈ ಮೇಲಿನಿಂದ ಕೈ ವಸ್ತ್ರಗಳನ್ನು ಉಡಿ ವಸ್ತ್ರಗಳನ್ನು ತಂದು ರೋಗಿಗಳ ಮೇಲೆ ಹಾಕಲು ಅವರವರ ರೋಗಗಳು ವಾಸಿಯಾದವು"[20] (ವಚನ 12). ಪೌಲನು ಆಶೀರ್ವದಿಸಲೀ ಎಂದು ಯಾರೂ ಪೌಲನ ಬಳಿಗೆ ಬಟ್ಟೆ ವಸ್ತ್ರಗಳನ್ನು ತರಲಿಲ್ಲ, ಆದರೆ ಅವನ "ಕೈ ವಸ್ತ್ರಗಳನ್ನು ಉಡಿ ವಸ್ತ್ರಗಳನ್ನು" ಅವನಿಂದ ಕೊಂಡೊಯ್ದರು. ಪೌಲನು ಸಾಧಾರಣವಾಗಿ ಧರಿಸಿದ ಬಟ್ಟೆಗಳೇ ಇರಬಹುದು. "ಉಡಿವಸ್ತ್ರಗಳು"[21] ಅಂದರೆ ಸಣ್ಣ ಚೌಕ ಹಾಗೂ ಅದರ ಬದಿಗಳನ್ನು ಹೊಲಿದಿದ್ದರೂ ಎಂಬುದಾಗಿರುವದಿಲ್ಲ, ಆದರೆ ಪೌಲನು ಗುಡಾರಗಳನ್ನು ಮಾಡುವಾಗ, ಅವನ ಬೆವರನ್ನು ಒರೆಸಿಕೊಳ್ಳಲು ಬಳಸಲಾದ ದೊಡ್ಡ ಬಟ್ಟೆ ಇರಬಹುದು. ಪದ್ಧತಿಯ ಮೇರೆಗೆ ಅವನು ಅದನ್ನು ತನ್ನ ತಲೆಗೆ ಸುತ್ತಿಕೊಂಡಿರಬಹುದು. ತರ್ಜುಮೆಗಾರರು ಅದನ್ನು "ಬೆವರು ಬಟ್ಟೆ"[22] ಎಂದು ಹೇಳಿರುವರು. "ಉಡಿವಸ್ತ್ರ" ಅಂದರೆ, ತನ್ನ ಬಟ್ಟೆಯನ್ನು ಕಾಪಾಡಲು ಬಳಸಿದ ಮೆಲೋದಿಕೆಯಾಗಿತ್ತು.[23]

ಈ ವಿಧವಾದ ಸ್ವಸ್ಥತೆ "ಅಸಾಧಾರಣವಾಗಿತ್ತು" ಹಾಗೂ ಆ ಕ್ರಮವನ್ನು ಮುಂದುವರಿಸ ಬೇಕೆಂಬ ನಿಯಮವಾಗಿರಲಿಲ್ಲ, ಇದು ಹೊಸ ಒಡಂಬಡಿಕೆಯ ಅಪರೂಪವಾದ ಕಾರ್ಯವಾ ಗಿತ್ತು ಅಪೊಸ್ತಲರ ಕೃತ್ಯಗಳು 19:12ನ್ನು ನಾನು ತಿಳಿಸಲೇ ಬೇಕು, ಏಕೆಂದರೆ ಬಡವರನ್ನೂ ರೋಗಿಗಳನ್ನೂ ಮೋಸ ಪಡಿಸಲು ಅನೇಕರು ಈ ಕ್ರಮವನ್ನು ಅನುಸರಿಸುವರು. ಸ್ವಸ್ಥತೆ ಮಾಡುವೆವು ಎಂದು ಹೇಳಿ, ಜನರಿಗೆ ಅವರು ನೀಡುವ ಕರ ವಸ್ತ್ರಗಳನ್ನು ಒಟ್ಟಾಗಿ ಸೇರಿಸಿ ದರೆ, ಅದು ಪ್ರಪಂಚದ ಬಹು ಭಾಗವನ್ನು ಆವರಿಸಬಹುದು!

ಮಾರ್ಕ 16:17, 18: "ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು, ... ಅವರು ರೋಗಿಗಳ ಮೇಲೆ ಕೈಯಿಟ್ಟರೆ ಇವರಿಗೆ ಗುಣವಾಗುವದು" ಎಂಬ ಯೇಸುವಿನ ಪ್ರವಾ ದನೆಯನ್ನು ದೇವರು ಪೌಲನ ಸೇವೆಯಲ್ಲಿ ಈಡೇರಿಸಿದನು. ದೇವರು ವಿಶೇಷವಾಗಿ ಅವನೊಂದಿಗಿದ್ದನು ಎಂಬುದನ್ನು ಎಫೆಸದವರು ಅರಿತುಕೊಂಡರು.

**ದೆವ್ವ ಬಿಡಿಸುವ ಮಾಂತ್ರಿಕರು ಅವಮಾನಗೊಂಡರು**

ಅವರಲ್ಲಿ ಕೆಲವರು ದೆವ್ವ ಹಿಡಿದವರ ಮೇಲೆ - ಪೌಲನು ಸಾರುವ ಯೇಸುವಿನ ಆಣೆ ಎಂದು ಹೇಳಿ: "ಕರ್ತನಾದ ಯೇಸುವಿನ ಹೆಸರನ್ನು ಪ್ರಯೋಗ ಮಾಡುವದಕ್ಕೆ ತೊಡಗಿದರು. ಮಹಾಯಾಜಕ ಸ್ಕೇವನೆಂಬ ಒಬ್ಬ ಯೆಹೂದ್ಯನ ಏಳು ಮಂದಿ ಮಕ್ಕಳು ಹಾಗೆ ಮಾಡುತ್ತಿದ್ದರು" (ಅಪೊಸ್ತಲರ ಕೃತ್ಯಗಳು 19:14). "ಮಹಾ ಯಾಜಕನು" ಅಂದರೆ, ಸ್ಕೇವ ಎಂಬವನು

ಮಹಾಯಾಜಕನ ವಂಶದವನಾಗಿರಬಹುದು.[24] ಒಂದು ವೇಳೆ ಅವರು ಸ್ವಾರ್ಥಕ್ಕಾಗಿ ಆ ಹೆಸರನ್ನು ಬಳಸಿಕೊಂಡಿರಬಹುದು (ಒಂದು ಔಷಧದ ಪೇಟೆಂಡ್ ಪದದ ಅಮೇರಿಕನ್ನರು ತಮ್ಮ ಹೆಸರಿನ ಮುಂದೆ ಡಾಕ್ಟರ್ ಮತ್ತು ಅಧ್ಯಾಪಕ ಎಂಬ ಹೆಸರನ್ನು ಹಾಕಿ ಕೊಳ್ಳುವಂತೆ). "ಲೂಕನ ದಿವಸಗಳಲ್ಲಿ ಅದನ್ನು ಕಂಡು ಹಿಡಿದಿದ್ದರೆ, ಅವನು ಅದನ್ನು ಆವರಣದಲ್ಲಿ ತೋರಿಸುತ್ತಿದ್ದನು."[25]

"ಏಳು" ಎಂಬ ಸಂಖ್ಯೆಯ ಅವನ ಕುಟುಂಬದ ರಹಸ್ಯದ ಸಂಕೇತವಾಗಿತ್ತು. ಯೆಹೂದ್ಯರು ಮಾತ್ರವಲ್ಲದೆ, ಮೂಢನಂಬಿಕೆಯ ಜನರು ಸಹ "ಏಳು" ಎಂಬ ಸಂಖ್ಯೆಯನ್ನು ಗುರುತರವಾದ ಸಂಖ್ಯೆ ಎಂದು ಭಾವಿಸಿದ್ದರು.[26]

ಅವರನ್ನು ಲೂಕನು "ದೆವ್ವ ಬಿಡಿಸುವ ಯೆಹೂದ್ಯರು" ಎಂಬ ಉಲ್ಲೇಖವನ್ನು ಮಾಡಿರುವನು, ಅವರು ಸಂಚಾರಿಗಳಾಗಿದ್ದರು (ವಚನ 13ಎ). ಗ್ರೀಕ್‌ನಲ್ಲಿ, "ದೆವ್ವಬಿಡಿಸುವವರನ್ನು ಜೋಡಿ ಪದವನ್ನು ಬಳಸಿ, "ಹೊರಗೆ" ಎಂಬ ಕ್ರಿಯಾ ಪದದಿಂದ, "ಓಥ್ ಶಪಥ"[27] ಎಂದು ಉಪಯೋಗಿಸಲಾಗಿದೆ. ಹೊಸ ಒಡಂಬಡಿಕೆಯ ಕಾಲದಲ್ಲಿ, ಕೆಲವು ಯೆಹೂದ್ಯರು ದೆವ್ವಗಳನ್ನು ಬಿಡಿಸುತ್ತಿದ್ದರು ಎಂಬ ಹೇಳಿಕೆಯನ್ನು ಲೌಕಿಕ ಹಾಗೂ ಪ್ರೇರಿತರಾದ ಬರಹಗಾರರು ದಾಖಲೆಮಾಡಿರುವರು (ಮತ್ತಾಯ 12:27; ಲೂಕ 11:19).[28]

ಸತ್ಯವೇದದ ಈ ವಚನ 13ರಲ್ಲಿ ಮಾತ್ರ "ದೆವ್ವ ಬಿಡಿಸುವವರು" ಎಂದು ಬರೆಯಲಾಗಿದೆ.[29] ಯೇಸು ದೆವ್ವ ಬಿಡಿಸುವವನಾಗಿರಲಿಲ್ಲ ದೆವ್ವವನ್ನು ಬಿಡುಸುವದಕ್ಕೆ ಯೇಸು ಶಪಥ ಮಾಡಲಿಲ್ಲ. ಆದರೆ ಆತನು ಸರಳವಾಗಿ "ಸುಮ್ಮನಿರು, ಇವನನ್ನು ಬಿಟ್ಟುಹೋಗು ಎಂದು ಹೇಳುತ್ತಿದ್ದನು ...!" (ಮಾರ್ಕ 1:25), ಆಗ ದುರಾತ್ಮವು ವಿಧೇಯವಾಗುತ್ತಿತ್ತು.[30] ಹಾಗೆಯೇ, ಅಪೊಸ್ತಲರು ದೆವ್ವಗಳನ್ನು ಬಿಡಿಸುವಾಗ, ದೊಡ್ಡ ತೋರಿಕೆಯನ್ನು ಮಾಡಲಿಲ್ಲ. ಅವರು ಯಾವದೇ ವಿಧವಾದ ಆಚರಣೆಯಂತೆ ಮಾಡದೆ, "ಅವಳನ್ನು ಬಿಟ್ಟು ಹೋಗು ಎಂದು ಯೇಸು ಕ್ರಿಸ್ತನ ಹೆಸರಿನಲ್ಲಿ ಅಪ್ಪಣೆಕೊಟ್ಟಿದ್ದರು ...!" (ಅಪೊಸ್ತಲರ ಕೃತ್ಯಗಳು 16:18) - ಆ ಮಾತು ತನ್ನ ಕಾರ್ಯವನ್ನು ಸಾಧಿಸಿತು.[31]

"ದೆವ್ವ ಬಿಡಿಸುವವರು" ಎಂದು ಹೇಳಿಕೊಳ್ಳುತ್ತಿದ್ದ, ಈ ಯೆಹೂದ್ಯರು ದೆವ್ವಗಳನ್ನು ಬಿಡಿಸುತ್ತಿದ್ದರೇ? ಸಾಧ್ಯವಿರಬಹುದು,[32] ಆದರೆ ಈ ಏಳು ಜನರು ನಿಜವಾಗಲೂ ಮೋಸಗಾರರಾಗಿದ್ದರು ಎಂದು ನಾನು ಅರಿತ್ತಿದ್ದೇನೆ[33] - ಮುಂದಿನ ಕಾರಣಗಳನ್ನು ನೋಡಿರಿ: (1) ಅವರು ಯಾವ ಮೂಲದ ಆಧಾರದಿಂದ ಈ ಕಾರ್ಯಮಾಡಿದರು ಎಂದು ತಿಳಿಯಿರಿ. ಯಥಾರ್ಥವಾದ ಮನುಷ್ಯನು ಕಳ್ಳರ ಗವಿಯಲ್ಲಿ ವ್ಯವಹಾರ ಮಾಡಲಾರನು ಅವರು ಗೂಢ ಠಕ್ಕರಾದ ಎಫೆಸದವರ ಪ್ರಭಾವಕ್ಕೆ ಒಳಗಾಗಿದ್ದರು. (2) ಅವರು ದೇಶ ಸಂಚಾರಿಗಳಾಗಿದ್ದರು ಎಂದು ವಿವರಿಸಲಾಗಿದೆ (ವಚನ 13). NCVಯಲ್ಲಿ ಅವರನ್ನು "ಪುಂಡರು" ಎನ್ನಲಾಗಿದೆ. NCVಯಲ್ಲಿ ಅವರು ಸ್ಥಳದಿಂದ ಸ್ಥಳಕ್ಕೆ ಹೋಗುತ್ತಿದ್ದರು ಎಂಬುದಾಗಿದೆ. ಆ ಮೋಸಕಾರರು ಒಂದು ಕಡೆ ನೆಲೆಸುವದು ಅಪಾಯಕಾರಿ ಎಂದು ತಿಳಿ ಆದ್ದರಿಂದ, ಅವರು ಸಂಚರಿಸುತ್ತಿದ್ದರು. (3) ಅವರು ಪೌಲನ ಪದ್ಧತಿಯನ್ನು ಬಳಸಿ ದೆವ್ವಗಳನ್ನು ಬಿಡಿಸುತ್ತಿದ್ದರು (ವಚನ 13). ಪೌಲನಂತೆ ಅವರ ಕಾರ್ಯಗಳು ಯಶಸ್ವಿಯಾಗಿದ್ದರೆ, ಪೌಲನ ಪದ್ಧತಿಯನ್ನು ಅವರು ಏಕೆ ಅನುಸರಿಸಿದರು? (4) ಅವರಲ್ಲಿ ದೇವನಂಬಿಕೆ ಇಲ್ಲದ್ದರಿಂದ, ಅವರು ಸೈತಾನನ ಒಡನಾಟದಲ್ಲಿದ್ದರು, ಅದರ ಅರಿವು ಅವರಿಗಿರಬಹುದು (ಪ್ರಕಟನೆ 2:9) ಸೈತಾನನು ಸೈತಾನನನ್ನು ಹೊರಡಿಸಿದರೆ ಅವನಲ್ಲೇ ಬೇಧವಾಗುತ್ತದೆ (ಮತ್ತಾಯ 12:26).

ಪೌಲನ ಯಶಸ್ವಿಯನ್ನು ಗಮನಿಸಿದ ಸ್ಕೇವನು ಪೌಲನ "ಪದ್ಧತಿಯನ್ನೇ" ಅನುಸರಿಸಿದನು, ಮತ್ತು ಅದನ್ನುಪರಿಶೀಲಿಸಿದನು. ಅವರಲ್ಲಿ ಕೆಲವರು ದೆವ್ವಹಿಡಿದವರ ಮೇಲೆ - ಪೌಲನು ಸಾರುವ ಯೇಸುವಿನ ಆಣೆ ಎಂದು ಹೇಳಿ ಕರ್ತನಾದ ಯೇಸುವಿನ

ಹೆಸರನ್ನು ಪ್ರಯೋಗ ಮಾಡುವದಕ್ಕೆ ತೊಡಗಿದರು (ಅಪೊಸ್ತಲರ ಕೃತ್ಯಗಳು 19:13ಬಿ). ಮೂಢನಂಬಿಕೆಗಳು ಕೆಲವು ನಿಗೂಢ ಹಾಗೂ ಮೋಡಿಯ ಶಕ್ತಿಯನ್ನು ಹೊಂದಿರುವ ಅವರ ಗ್ರಂಥಗಳು "ರಹಸ್ಯವಾದ" ಯಶಸ್ವಿಯ ಭಲವನ್ನು "ಖಂಡಿತವಾಗಿ" ನೀಡುತ್ತದೆ ಮತ್ತು ಅದರಿಂದ ಯಜಮಾನನಿಗೆ ಬಹು ಆದಾಯವಾಗುತ್ತದೆ ಎಂದು ಹೇಳುತ್ತಿದ್ದವು (ವಚನ 19). ಅವನ ಏಳು ಜನ ಮಕ್ಕಳು ಪೌಲನು ಬಳಸುತ್ತಿದ್ದ "ಯೇಸು" ಎಂಬ ಪದವನ್ನು ಪೌಲನ ರಹಸ್ಯ ಪದವೆಂದು ತಿಳಿದು ಬಳಸಿದರು, ಆದರೆ ಯೇಸುವನ್ನು ಅವರು ವ್ಯಕ್ತಿಗತವಾಗಿ ಅರಿತಿರಲಿಲ್ಲ, "*ಪೌಲನು* ಸಾರುವ ಯೇಸುವಿನ ಆಣೆ ಎಂದು ಹೇಳಿ ಯೇಸುವಿನ ಹೆಸರನ್ನು ಪ್ರಯೋಗ ಮಾಡುವದಕ್ಕೆ ತೊಡಗಿದರು" (ವಚನ 13ಸಿ; ಒತ್ತಿ ಹೇಳಿದ್ದು ನನ್ನದು).

ಆದರೆ ದೆವ್ವವು ಒಂದು ತಮಾಷೆಯ ಪ್ರತಿಕ್ರಿಯೆಯನ್ನು ತೋರಿತು:

> ಆದರೆ ದೆವ್ವವು ಅವರಲ್ಲಿ ಇಬ್ಬರಿಗೆ - ಯೇಸುವಿನ ಗುರುತು ನನಗುಂಟು;[35] ಪೌಲನನ್ನೂ ಬಲ್ಲೆನು,[36] ನೀವಾದರೆ ಯಾರು? ಎಂದು ಹೇಳಿತು; ಮತ್ತು ದೆವ್ವಹಿಡಿದಿದ್ದ ಆ ಮನುಷ್ಯನು ಅವರ ಮೇಲೆ ಹಾರಿ ಬಿದ್ದು ಅವರಿಬ್ಬರನ್ನೂ ಸೋಲಿಸಿ[37] ಬಲಾತ್ಕರಿಸಿದ್ದರಿಂದ ಅವರು ಬೆತ್ತಲೆಯಾಗಿಯೂ ಗಾಯವುಳ್ಳವರಾಗಿಯೂ ಆ ಮನೆಯೊಳಗಿಂದ ಓಡಿಹೋದರು (ವಚನಗಳು 15, 16).

ದೆವ್ವ ಹಿಡಿದಿದ್ದವನು ಅಲೌಕಿಕ ಮಾನವ ಭಲವನ್ನು ಹೊಂದಿದವನಾಗಿ ದೆವ್ವ ಬಿಡಿಸುವವರ[38] ಮೇಲೆ ಬಿದ್ದನು (ಮಾರ್ಕ 5:2-4). ಅವರುಗಳು ಹೆದರಿ ಓಡಿ ಹೋಗುವಂತೆ ಮಾಡಿದನು. ಅವರ ಬಟ್ಟೆಗಳನ್ನು ಹರಿದನು,[39] ಬಲತ್ಕಾರದಿಂದ, ಅವರನ್ನು ಬೆತ್ತಲೆಯಾಗಿಯೂ ಗಾಯವುಳ್ಳವರಾಗಿಯೂ ಓಡಿ ಹೋದರು. ಅವರು ಯೇಸುವಿನ ಹೆಸರನ್ನು (ಅವರ ಆಚಾರದಂತೆ) ಹೇಳಿ ಅಂದರೆ, ಅಭ್ಯಾಸವಿಲ್ಲದ ಆಯುಧವನ್ನು ಬಳಸುವಾಗ ಅದನ್ನು ಅವರು ಬಳಸಿದಾಗ ಅದು ಅವರ ಕೈಯಲ್ಲಿ ಸಿಡಿಯಿತು.[40] ಆ ಹೆಸರನ್ನು, ಒಂದು ನಿಗೂಢ ಶಕ್ತಿಯ ಗುಣ ಎಂದು ಅವರು ತಿಳಿದದ್ದು ತಪ್ಪಾಯಿತು, "ಆದರೆ ಆತನ ಹೆಸರಿನಲ್ಲಿ ಅವರು ಇಟ್ಟಿದ್ದ ನಂಬಿಕೆಯಿಂದ ಯೇಸುವಿನ ನಾಮದಲ್ಲಿ ಶಕ್ತಿಯುಂಟಾಯಿತು" (ಅಪೊಸ್ತಲರ ಕೃತ್ಯಗಳು 3:16; ಒತ್ತಿ ಹೇಳಿದ್ದು ನನ್ನದು).

**ಯೇಸುವಿಗೆ ಮಹಿಮೆ ಉಂಟಾಯಿತು**

ಈ ದೆವ್ವ ಬಿಡಿಸುವವರ ಸುದ್ದಿಯು ಆ ಪಟ್ಟಣದಲ್ಲೆಲ್ಲಾ ಹಬ್ಬಿದಾಗ, ಈ ಸಂಗತಿಯು ಎಫೆಸದಲ್ಲಿ ವಾಸವಾಗಿದ್ದ ಎಲ್ಲಾ ಯೆಹೂದ್ಯರಿಗೂ ಗ್ರೀಕರಿಗೂ ತಿಳಿದು ಬಂದಾಗ ಅವರೆಲ್ಲರಿಗೆ ಭಯಹಿಡಿಯಿತು (19:17ಎ). ಈ ಕಾರಣದಿಂದ ಪೌಲನು ದೇವರಿಂದ ನೇಮಕಗೊಂಡವನು, ಮತ್ತು ಅದ್ಭುತ ಕಾರ್ಯಗಳನ್ನು ಮಾಡುವೆವು ಎಂಬುವವರು ದೇವರಿಂದ ತಿರಸ್ಕರಿಸಲ್ಪಟ್ಟವರು ಎಂಬದು ಸಾಭೀತಾಯಿತು. ಅದರ ಒಂದು ಪರಿಣಾಮವೇನೆಂದರೆ, "ಅವರು ಭಯಗ್ರಸ್ತ ರಾದರು" (ವಚನ 17ಬಿ), ಅನನೀಯ ಮತ್ತು ಸಪ್ಫೈರಳಿಗೆ ದೇವರ ಶಿಕ್ಷೆ ಉಂಟಾದಾಗ ಇದೇ ವಿಧವಾದ ಭಯವನ್ನು ಯೆರೂಸಲೇಮಿನವರು ಅನುಭವಿಸಿದ್ದರು (5:10). ಇನ್ನೊಂದು ಪರಿಣಾಮವೇನೆಂದರೆ; ಮತ್ತು ಕರ್ತನಾದ ಯೇಸುವಿನ ಹೆಸರು ಪ್ರಖ್ಯಾತಿಗೆ ಬಂತ್ತು (19:17ಸಿ). ಯೇಸುವಿನ ನಾಮವನ್ನು ಉಚ್ಚರಿಸುವುದು, ಅವರ ಆರೋಗ್ಯಕ್ಕೆ ಅಪಾಯಕಾರಿ ಎಂದು ಆ ನಿಗೂಢ ಪಂಥದವರು ಅರಿತುಕೊಂಡರು!

ಈ ಘಟನೆಯು, ಮುಖ್ಯ ಪರಿಣಾಮವಾಗಿ, ಅನೇಕ ಕ್ರೈಸ್ತರಿಗೆ ತಿಳುವಳಿಕೆಯ ಜ್ಞಾನ ಉಂಟಾಯಿತು. ಎಫೆಸದ ಕೆಲವರು ತಮ್ಮ ಬಾಲ್ಯ ಪ್ರಾಯದಿಂದ ಈ ನಿಗೂಡ ಶಕ್ತಿಗಳಿಗೆ ಒಳಪಟ್ಟಿದ್ದರು, ಮತ್ತು ಅವರುಗಳು ಕ್ರೈಸ್ತರಾದ ನಂತರವೂ ಅದರ ಆಚರಣೆಯನ್ನು ನಿರಾಕರಿಸಿರಲಿಲ್ಲ. ಯಥಾರ್ಥವಾದ ಅದ್ಭುತಕ್ಕೂ ಮತ್ತು ಮೋಡಿಗೂ ದೊಡ್ಡ

ವ್ಯತ್ಯಾಸವಾಗಿದ್ದರಿಂದ, "ಆತನನ್ನು ನಂಬಿದವರಲ್ಲಿ ಅನೇಕರು ಬಂದು ತಮ್ಮ ಕೃತ್ಯಗಳನ್ನು ಒಪ್ಪಿಕೊಂಡು ತಿಳಿಸಿದರು" (ವಚನ 18).[41] ಮುಂದುವರಿದ ಕ್ರಿಯೆಯನ್ನು ಗಮನಿಸಿ: "ಅವರು ಒಂದು ಅರಿಕೆಮಾಡುತ್ತಿದ್ದರು ..."[42] ಮೊದಲಿಗೆ ಒಬ್ಬ ಕ್ರೈಸ್ತನು ಬಂದು ತನ್ನ ಕೃತ್ಯವನ್ನು ಒಪ್ಪಿಕೊಂಡು ಅರಿಕೆಮಾಡಿದನು; ನಂತರ ಎರಡನೆಯವನು ಬಂದನು; ನಂತರ ಹೆಚ್ಚಿನ ಜನ ಬಂದರು, ಹಾಗೆಯೇ, ಹೆಚ್ಚೆಚ್ಚಾದ ಜನರು ತಮ್ಮ ಮೂಡ ನಂಬಿಕೆಗಾಗಿ ಮಾನಸಾಂತರಪಟ್ಟು, ಅರಿಕೆಮಾಡಿದರು.

"ತಮ್ಮ ಕೃತ್ಯಗಳನ್ನು ಒಪ್ಪಿಕೊಂಡು ತಿಳಿಸಿದರು" ಎಂಬ ಹೇಳಿಕೆಯನ್ನು ಗ್ರಹಿಸುವಾಗ "ನಿಗೂಢ" ಎಂಬುದು "ಗೋಪ್ಯವಾದ" ಸಂಗತಿ ಎಂಬುದನ್ನು ನೆನಪು ಮಾಡಿಕೊಳ್ಳಿರಿ. ನಿಗೂಢ ಪಂಥದವರು ಗೋಪ್ಯವಾದ ಜ್ಞಾನವನ್ನು ಹೊಂದಿ ಅದರಿಂದ ವ್ಯವಹಾರವನ್ನು ಮಾಡುವವರು ಅದು, ಅವರಲ್ಲಿ ಕೆಲವರಿಗೆ ಮಾತ್ರ ಲಭ್ಯವಿತ್ತು. ಆ ರಹಸ್ಯಗಳನ್ನು ಬಹಿರಂಗ ಪಡಿಸುವುದು ಎಂದರೆ, "ಆ ನಿಗೂಡ ಶಕ್ತಿಗಳಿಂದ" ಪ್ರತ್ಯೇಕವಾಗುವದು ಎಂಬ ಅರ್ಥವಾಗಿದೆ.[43]

ದೆವ್ವ ಬಿಡಿಸುವವರು ಯೇಸುವಿನ ನಾಮವನ್ನು ಬಳಸಿದ್ದರಿಂದ ಅವರಲ್ಲಿ ಉಂಟಾದ ಘಟನೆಯು, ಸಭೆಯ ಒಳಗೆ ಇದ್ದವರ ಮೇಲೂ ಪರಿಣಾಮ ಬೀರಿತ್ತು.[44] ಆದ್ದರಿಂದ ಮಾಟ ಮಂತ್ರ ನಡಿಸಿದವರಲ್ಲಿ "ಅನೇಕರು ತಮ್ಮ ಪುಸ್ತಕಗಳನ್ನು ತಂದು ಕೂಡಿಸಿ ಎಲ್ಲರ ಮುಂದೆ ಸುಟ್ಟು ಬಿಟ್ಟರು. ಅವುಗಳ ಕ್ರಯವನ್ನು ಲೆಕ್ಕಮಾಡಿ ಐವತ್ತು ಸಾವಿರ ಬೆಳ್ಳಿ ನಾಣ್ಯ ಆಯಿತೆಂದು ತಿಳಿದುಕೊಂಡರು" (ವಚನ 19). ಈ ಪುಸ್ತಕಗಳಲ್ಲಿ ಶಾಪದ ಹಾಗೂ ಒಳಿತಿನ ಆಲೋಚನೆಯ ಪದಗಳಿದ್ದವು, ಅದರಲ್ಲಿ ಪ್ರೇಮವಶ, ದೆವ್ವಗಳನ್ನು ಬಿಡಿಸುವ ಮಂತ್ರಗಳು, ಭವಿಷ್ಯವಾಣಿಗಳು ಇದ್ದವು. ಬೆಳ್ಳಿಯ ನಾಣ್ಯಗಳನ್ನು ಗ್ರೀಕ್‌ನಲ್ಲಿ "ಡ್ರಾಕ್ - ಮಾಸ್" ಎಂದು ಕರೆಯುವರು.[45] ರೋಮಾಯರ ದಿನಾರಿಯಂತೆ ಡ್ರಾಕ್‌ಮಾಸ್ ಬೆಳ್ಳಿಯ ಬಿಲ್ಲೆಯಾಗಿತ್ತು. ಅದು ಒಂದು ದಿನದ ಕೂಲಿಯಾಗಿತ್ತು. ಅಲ್ಲಿ ಬೆಂಕಿಗೆ ಅಹುತಿಯಾದದ್ದನ್ನು ಸ್ಥಳೀಯವಾಗಿ ಲೆಕ್ಕ ಹಾಕಿದರೆ, ನೂರಾರು ಸಾವಿರ ಬೆಲೆಬಾಳಬಹುದು!

ಆ ಪುಸ್ತಕಗಳನ್ನು ಮಾರಿ, ಅದರ ಹಣವನ್ನು ದೇವರ ಸೇವೆಗೆ ನೀಡಬಹುದಿತ್ತು ಎಂಬುದು ಕೆಲವರ ಅಭಿಪ್ರಾಯ. ಅ ಎಫೆಸದವರ "ಗೋಪ್ಯ ಪುಸ್ತಕಗಳನ್ನು" ಬೆಂಕಿಗೆ ಎಫೆಸೆದವರು: ತಾವು ತಮ್ಮ ಹಿಂದಿನ ಜೀವಿತದಿಂದ ಪ್ರತ್ಯೇಕವಾಗಿದ್ದರು, ಅದನ್ನು ಎಲ್ಲರೂ ತಿಳಿಯಬೇಕೆಂಬ ವಿಚಾರವನ್ನು ಇದರ ಮೂಲಕ ಸಾಬೀತು ಪಡಿಸಿದರು (ನೋಡಿರಿ ಮತ್ತಾಯ 3:8). ಮತ್ತು ಆ ದಾಖಲೆಗಳ ಮೂಲಕ ಯಾರನ್ನು ಶಪಿಸದಂಥ ನಿರ್ಣಯವನ್ನು ಕೈಗೊಂಡರು.

ಅದರ ಪರಿಣಾಮವಾಗಿ, "ಕರ್ತನ ವಾಕ್ಯವು ಬಹಳವಾಗಿ ಹೆಚ್ಚುತ್ತಾ ಪ್ರಬಲವಾಯಿತ್ತು" (ವಚನ 20).[46] ಎಫೆಸದ ಸವಾಲನ್ನು ಪ್ರಭಲವಾಗಿ ಎದುರಿಸಲಾಯಿತು.

## ಮುಂದುವರೆದ ಸವಾಲು

ಎಫೆಸದವರು ಸುಡುತ್ತಿದ್ದ ಆ ಬೆಂಕಿಯ ಜ್ವಾಲೆಯು ಮೇಲಕ್ಕೇರುವಾಗ, "ದೇವರು ನಮ್ಮಿಂದ ಏನನ್ನು ಬಯಸುತ್ತಾನೆ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಬೇಕು?"

### ಸೈತಾನನೊಂದಿಗಿನ ಸಕಲ ಕ್ರಿಯೆಗಳಿಂದ ಮುಕ್ತರಾಗಬೇಕು

ನಿಗೂಢ ಪಂಥದವರ ಸಹವಾಸವನ್ನು ಯಾವುದೇ ರೀತಿಯಲ್ಲಾದರೂ ನಿರಾಕರಿಸಬೇಕು ಎಂದು ದೇವರು ಇಚ್ಛಿಸುತ್ತಾನೆ. ಕ್ರೈಸ್ತರು, ಜಾತಕವನ್ನು ನೋಡುವುದಾಗಲಿ ಮಾನಸಿಕ ಭವಿಷ್ಯವನ್ನಾಗಲಿ,[47] ಶುಭ ಸೂಚನೆಯ ವಸ್ತುಗಳ ಸಂಗಡ ಸಂಬಂಧವನ್ನು ಹೊಂದಿರಬಾರದು[48] ನಿಗೂಢ ಶಕ್ತಿಯು ಅಪಾಯಕರವಾದದ್ದೆ:

(1) ರಹಸ್ಯವಾದವುಗಳನ್ನು ನಾವು ಅರಿಯಬಾರದೆಂದು ದೇವರು ಬಯಸುತ್ತಾನೆ

(ಧರ್ಮೋಪದೇಶಕಾಂಡ 29:29). ಜೀವಿತಕ್ಕೆ ಅಗತ್ಯವಿರುವ ಸಕಲ ಸಂಗತಿಗಳನ್ನು ದೇವರು ಸತ್ಯವೇದದಲ್ಲಿ ಪ್ರಕಟಿಸಿರುವನು (ಯೋಹಾನ 14:26;[49] 2 ಪೇತ್ರ 1:3; 2 ತಿಮೊಥೆ 3:16, 17; ಕೊಲೊಸ್ಸೆ 1:28). ಉತ್ತರವನ್ನು ಪಡೆಯುವದಕ್ಕಾಗಿ ಯಾವಾಗಲೂ ನಾವುಗಳು ಅಡ್ಡದಾರಿಯನ್ನೇ ಹಿಡಿಯುತ್ತೇವೆ.[50] ಮನುಷ್ಯನು ಆ ಜ್ಞಾನಕ್ಕಾಗಿ ಕಾತುರನಾದಾಗ, ಬಿದ್ದು ಹೋದನು ಎಂಬುದನ್ನು ನೆನಪು ಮಾಡಿಕೊಳ್ಳಿರಿ (ಆದಿಕಾಂಡ 3:1-7).

(2) ನಿತ್ಯವಾದ ಸತ್ಯವನ್ನು ಅರಿಯಬೇಕೇ ವಿನಃ, ದುರಾಭಿಲಾಷೆಯ ಸಂಗತಿಗಳಿಂದ ತೃಪ್ತಿಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸಬಾರದು, ಅದು ಅಪಾಯವೇ, ನಿಗೂಡ ಶಕ್ತಿಯು "ಪ್ರಕಟನೆಗಳ" ಕ್ಷುಲ್ಲಕವಾಗಿವೆ; ಸತ್ಯವೇದವು ಪಾಪ ಮತ್ತು ರಕ್ಷಣೆ, ಪರಲೋಕ ಹಾಗೂ ನರಕದ ಕುರಿತು ತಿಳಿಸುತ್ತದೆ.

(3) ನಮ್ಮ ಜೀವಿತವನ್ನು ದೇವರಲ್ಲಿ ಕೇಂದ್ರೀಕರಿಸುವ ಬದಲು, ಮನುಷ್ಯನಲ್ಲಿ ಕೇಂದ್ರೀ ಕರಿಸುವದು ಅಪಾಯವಾಗಿದೆ. ನಿಗೂಢ ಶಕ್ತಿಯ ಪ್ರಪಂಚ ಹೇಳುವದೇನೆಂದರೆ, "ಸರ್ವ ಸಂಗತಿಗಳಲ್ಲಿ, ನಿನ್ನ ವ್ಯಯಕ್ತಿಕವಾದ ಸಮಸ್ಯೆಗಳೇ ಪ್ರಮುಖವಾದದ್ದು, ನಿನ್ನ ಸ್ವಂತ ಪ್ರಯತ್ನದಿಂದ ನಿನ್ನ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಬಹುದು." ಒಬ್ಬನು ನಿಗೂಢ ಶಕ್ತಿಗೆ ಸಮೀಪನಾದರೆ, ದೇವರಿಂದ ದೂರವಾಗುವನು.

(4) ಸೈತಾನನ ಅಧಿಕಾರಕ್ಕೆ ನಮ್ಮ ಮನಸ್ಸನ್ನು ಒಪ್ಪಿಸಬಾರದು, ಅದು ಸಹ ಅಪಾಯವೇ ಒಬ್ಬನು ನಿಗೂಢ ಶಕ್ತಿಗೆ ಒಳಗಾಗುವಾಗ, ಸೈತಾನನ ಪ್ರಪಂಚಕ್ಕೆ ಪ್ರವೇಶವಾಗುವನು. ನಿಗೂಢ ಶಕ್ತಿಗಳಿಗೆ, ನಿಮ್ಮ ಸ್ವಂತ ಚಿತ್ತವನ್ನೇ ಸಮರ್ಪಿಸಬೇಕಾಗುತ್ತದೆ (ಮನಸ್ಸನ್ನು ಖಾಲಿ ಇಡಬೇಕಾಗುತ್ತದೆ). ಪ್ರತಿ ನಿಗೂಢ ಆಚರಣೆಯಲ್ಲಿ, ನಿಮ್ಮ ಜೀವಿತವನ್ನು ಹತೋಟಿಗೆ ತರಲು ಸೈತಾನನಿಗೆ ಅವಕಾಶ ನೀಡಬೇಕಾಗುತ್ತದೆ. ಅನನೀಯನು ತನ್ನ ಮನಸ್ಸನ್ನು ಸೈತಾನನಿಗೆ ಒಪ್ಪಿಸಿನು (ನೋಡಿರಿ ಅಪೊಸ್ತಲರ ಕೃತ್ಯಗಳ 5:3[51]); ನೀವು ಅವನಿಗೆ ಅವಕಾಶಕೊಟ್ಟರೆ, ಅದೇ ಗತಿಯು ನಿಮಗೂ ಉಂಟಾಗುತ್ತದೆ.

(5) ಸತ್ಯದಿಂದ ಮಾರ್ಗ ತಪ್ಪಿ ತಪ್ಪಾದ ಕಡೆಗೆ ಹೋಗುವುದು ಅಪಾಯವಾಗಿದೆ. ಅದು ನಾಶನಕ್ಕೆ ನಡಿಸುತ್ತದೆ. ದೇವರ ಉದ್ದೇಶಕ್ಕೆ ವಿರೋಧವಾಗಿ ಸೈತಾನನು, ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಲು ನಿಗೂಢ ಶಕ್ತಿಯನ್ನು ಪ್ರಯೋಗಮಾಡುವನು. ಕರ್ತನನ್ನು ಹೊರತು ಪಡಿಸಿ, ಜನರು ತನ್ನನ್ನೇ ಹಿಂಬಾಲಿಸುವಂತೆ ಮಾಡುವನು: ನಿತ್ಯನರಕದಲ್ಲಿ, ಎಲ್ಲರೂ ಅವನೊಂದಿಗೆ ಇರಬೇಕೆಂದು ಬಯಸುತ್ತಾನೆ; ಪರಲೋಕದಲ್ಲಿ ಅವರು ಇರಲು ಅವನು ಇಚ್ಚಿಸುವದಿಲ್ಲ. ಈ ನಿಗೂಢ ಶಕ್ತಿಗಳಿಂದ ಪ್ರತ್ಯೇಕವಾಗಿರಬೇಕೆಂದು ದೇವರ ವಾಕ್ಯವು ಸರಳವಾಗಿ ತಿಳಿಸುತ್ತದೆ!

"ಈ ಲೋಕದ ದೇವರಾದ ಸೈತಾನನು" ನಂಬಿಕೆಯಿಲ್ಲದವರ ಕಣ್ಣುಗಳನ್ನು ಕುರುಡು ಮಾಡಿರುವನು (2 ಕೊರಿಂಥ 4:4). ಅವರುಗಳ ಜಾತಕವನ್ನು, ಮಾನಸಿಕ ಇಚ್ಛೆಯನ್ನು ಮಾರುವ ಚಿತ್ರಗಳಿರುವ ಹಲಗೆಗಳನ್ನು ಶುಭಸೂಚನೆಯ ವಸ್ತುಗಳನ್ನೂ ಹೊಂದಬಹುದೆಂದು ಸೈತಾನನು ಪ್ರೇರಿಸುತ್ತಾನೆ,[52] ಆದರೆ ದೇವವಾಕ್ಯದ ಬೆಳಕನ್ನು ಹೊಂದಿರುವ ಕ್ರೈಸ್ತನು, ಅವುಗಳು ಅಪಾಯಕಾರಿಯಾದ ಸರ್ಪದಂತೆ ಇರುವವು ಎಂದು ತಿಳಿಯುವನು. ಕ್ರೈಸ್ತನು ಯಾವುದೇ ನಿರ್ಭಂದಗಳಿಲ್ಲದೇ ಅವುಗಳನ್ನು ಪೂರ್ಣ ನಿರಾಕರಿಸಬೇಕು. ನಿಗೂಢ ಶಕ್ತಿಯಲ್ಲಿ ಅಲ್ಪವಾಗಿ ಪಾಲು ತೆಗೆದುಕೊಳ್ಳುವದು; ಚಿಕ್ಕದಾಗಿ ಗರ್ಭಧರಿಸಿದಂತೆ.

### ಹಳೆಯ ಪಾಪದ ಜೀವಿತವನ್ನು ಪೂರ್ಣವಾಗಿ ನಿರಾಕರಿಸಬೇಕು

"ನಾನು ನಿಗೂಢ ಶಕ್ತಿಗಳೊಂದಿಗೆ, ಯಾವುದೇ ಸಂಪರ್ಕವನ್ನು ಹೊಂದಿರುವದಿಲ್ಲ ಎಂದು ನೀನು ಹೇಳಬಹುದು." ಆ ರೀತಿ ನೀನು ಇಲ್ಲದಿದ್ದರೂ, ನಿನಗಾಗಿ ಒಂದು ಬಲಪ್ರದ ವಾದ ಸಂದೇಶವನ್ನು ನಮ್ಮ ಪಾಠದಲ್ಲಿ ನಾನು ಹೇಳುತ್ತೇನೆ: ನಿನ್ನ ಹಳೆ ಪಾಪದ ಜೀವಿತದಿಂದ

ಪೂರ್ಣವಾಗಿ ಸಂಪರ್ಕವನ್ನು ಕಳೆದುಕೋ.

ತಿಳುವಳಿಕೆಯಲ್ಲಿ ನಾವು ಮಾನಸಾಂತರ ಪಟ್ಟು ಕ್ರೈಸ್ತರಾದರೆ, ಹಳೆಯ ಪಾಪದ ಸ್ವಭಾವಗಳೆಲ್ಲವೂ ಮುರಿದು ಹೋಗುತ್ತವೆ (ಅಪೊಸ್ತಲರ ಕೃತ್ಯಗಳು 2:38). ವಾಸ್ತವಾಗಿ, ಎಲ್ಲವನ್ನು ಒಂದೇ ಸಾರಿ ಬಿಟ್ಟು ಕೊಡುವದು ಅಸಾಧ್ಯವಾಗುತ್ತದೆ. ನಂಬಿದಂತ ಅನೇಕ ಜನರಾದ ಎಫೆಸದವರು, ತಮ್ಮ ಹಳೆಯ ಕಾರ್ಯಗಳನ್ನು ಹಾಗೆಯೇ ಮುಂದುವರಿಸಿದ್ದರು (19:18).[53] ಅದೇ ರೀತಿಯಲ್ಲಿ ಆಕರ್ಷಿತವಾದ ಹಳೆಯ ಪಾಪಗಳಲ್ಲಿ, ನಾವು ಇನ್ನೂ ಮುಂದುವರಿಯುತ್ತಿರಬಹುದು. ಅದು ಸುಳ್ಳಿನಿಂದ, ಸುಂಕ ನೀಡದ ಸ್ಥಿತಿಯವರೆಗೆ, ಕೆಟ್ಟ ಚಿತ್ರಗಳನ್ನು ನೋಡಿ, ದೇಹ ದುರಾಶೆಗಳನ್ನು ಈಡೇರಿಸುವ ವಿಷಯವರೆಗೆ ಇರಬಹುದು.

ಒಬ್ಬ ಯೌವನಸ್ಥನು ದೀಕ್ಷಾಸ್ನಾನ ಹೊಂದಿ ಅನೇಕ ವಾರಗಳು ಕಳೆದ ನಂತರ, ಅವನು ಒಂದು ಉದ್ದನೆಯ ಪೆಟ್ಟಿಗೆ ತಂದು ಅದರಲ್ಲಿ, ಪ್ಲೇ ಬಾಯ್ ಚಿತ್ರಗಳನ್ನು ತುಂಬಿಕೊಂಡು, ಪ್ರಸಂಗಿಯ ಬಳಿಗೆ ಬಂದನು. "ನಾನು ಕ್ರೈಸ್ತನಾಗಿರುವದರಿಂದ ಇವುಗಳನ್ನೂ ನನ್ನ ಬಳಿಯಲ್ಲಿ ಇಟ್ಟು ಕೊಳ್ಳಲಾರೆನು" ಅಂದನು. ಪ್ರಸಂಗಿ ಮತ್ತು ಆ ಯೌವನಸ್ಥನು ಒಟ್ಟಿಗೆ ಸೇರಿ ಆ ಮುದ್ರಿತ ಪುಸ್ತಕಗಳನ್ನು ಹೊರ ಹಾಕಿದರು. ಅನೇಕ ತಿಂಗಳುಗಳು ಕಳೆದ ನಂತರ, ಆ ಯೌವನಸ್ಥನು ಒಂದು ದೊಡ್ಡ ಲಕೋಟೆಯನ್ನು ತೆಗೆದುಕೊಂಡು ಪ್ರಸಂಗಿಯ ಬಳಿಗೆ ಪುನಃ ಬಂದನು. ಅವನು ಆ ಲಕೋಟೆಯಲ್ಲಿದ್ದವುಗಳನ್ನು ಪ್ರಸಂಗಿಯ ಮೇಜಿನ ಮೇಲೆ ಇಟ್ಟು, ಒಂದು ವಿಶಿಷ್ಟ ವಾದ ನಗುವನ್ನು ತೋರಿದನು, "ನಾನು ನಿನಗೆ ನೀಡಿದ ಪುಸ್ತಕಗಳಿಂದ ಈ ಚಿತ್ರಗಳನ್ನು ಕತ್ತರಿಸಿಕೊಂಡು, ನಂತರ ಅವುಗಳನ್ನು ನಿನಗೆ ನೀಡಿದ್ದೆನು" ಅಂದನು. ಹೌದು ಹಳೆಯ ಪಾಪದ ಸಂಕೋಲೆಯಿಂದ ಕಳಚಿಕೊಳ್ಳುವದು ಕಷ್ಟಕರವೇ.

ನಮ್ಮಲ್ಲಿ ಕೆಲವರು ನಮ್ಮದೇ ಆದ ಬೆಂಕಿಯನ್ನು ಹತ್ತಿಸಿ, ನಮ್ಮ ಪಾಪದ ಸ್ವಭಾವವನ್ನು ಮತ್ತು ಕೆಟ್ಟ ಚಟಗಳನ್ನು ಆ ಬೆಂಕಿಯಲ್ಲಿ "ಎಸೆಯಬೇಕಾಗಿದೆ"!

## ಮುಕ್ತಾಯ

ಎಫೆಸದವರು ನಿಗೂಢ ಶಕ್ತಿಗೆ ಒಳಗಾಗಿದ್ದರಿಂದ ತಪ್ಪಾದ ಹಾದಿಯಲ್ಲಿದ್ದರು, ಆದರೆ ಅವರು ಆತ್ಮನ ಪ್ರಪಂಚವನ್ನು ಸರಿಯಾಗಿ ತಿಳುಕೊಂಡಿದ್ದರು ಎಂದು ನಂತರ ಪೌಲನು ಬರೆದನು:

> ಸೈತಾನನ ತಂತ್ರೋಪಾಯಗಳ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ. ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾ ಗಿದ್ದೇವೆ (ಎಫೆಸ 6:11, 12).

ಮನುಷ್ಯನ ಚಿತ್ತವಿಲ್ಲದೆ, ಸೈತಾನನು ಅವನ ಮೇಲೆ ಅಧಿಕಾರ ಚಲಾಯಿಸುವದಿಲ್ಲ, ಅಂದರೆ ಸೈತಾನನು ನಮ್ಮನ್ನು ಆಳುವುದೇ ಇಲ್ಲ ಎಂಬ ಅರ್ಥವೂ ಆಗಿರುವದಿಲ್ಲ. ಸೈತಾನನ ಶಕ್ತಿಗಳು ಎಂದಿಗೂ ಅದ್ಭುತಗಳನ್ನು ಮಾಡಲಾರವು (ಒಳ್ಳೆಯ ಶಕ್ತಿಗಿಂತಲೂ ಹೆಚ್ಚಿನದನ್ನು ಮಾಡುವದಿಲ್ಲ) ಆದರೆ ಅವನು ಮೋಸ ಮಾಡನು ಎಂಬ ಅರ್ಥವೂ ಆಗಿರುವದಿಲ್ಲ (ಪ್ರಕಟಣೆ 20:10). "ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ" (1 ಪೇತ್ರ 5:8). "ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ" (2 ಕೊರಿಂಥ 2:11).

ನಾವು ಕರ್ತನಿಗೆ ಸಮೀಪರಾಗಿದ್ದರೆ, ಸೈತಾನನಿಗೆ ಭಯಪಡುವ ಅಗತ್ಯವಿಲ್ಲ

(ಯಾಕೋಬ 4:7). ಯೋಹಾನನು ಈ ಭರವಸೆಯನ್ನು ನೀಡಿರುವನು. "... ನಮ್ಮಲ್ಲಿರುವಾತನು, ಈ ಲೋಕದವನಿಗಿಂತಲೂ ದೊಡ್ಡವನು" (1 ಯೋಹಾನ 4:4). ಇನ್ನೊಂದು ವಿಧದಲ್ಲಿ, "ಕ್ರಿಸ್ತನು ನಿನ್ನಲ್ಲಿದ್ದರೆ" ಪ್ರಪಂಚದಲ್ಲಿರವವನು ನಿನಗಿಂತ ದೊಡ್ಡವನು! ಇದು ಹಗುರವಾದ ಸಂಗತಿಯೆಂದು ಪರಿಗಣಿಸಬಾರದು. ಆತ್ಮೀಯ ಹೋರಾಟದಲ್ಲಿ ಜಯಸಾಧಿಸಲು, ನೀನು ಯೇಸುವಿನ ಸಹಾಯವನ್ನು ಪಡೆಯಬೇಕು! ನೀನು ಆತನ ಹೆಸರನ್ನು ಹೊಂದದೆ, ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳದೆ ಇದ್ದರೆ (ಗಲಾತ್ಯ 3:26, 27), ಅದನ್ನು ಈಗಲೇ ಮಾಡು. ಕ್ರೈಸ್ತನಾಗಿ ನಿನ್ನ ಹೃದಯದಲ್ಲಿ ಏನನ್ನಾದರು ಮುಚ್ಚಿಟ್ಟುಕೊಂಡಿದ್ದರೆ, ಅದು ಸೈತಾನನಿಗೆ ಅವಕಾಶವನ್ನು ನೀಡುತ್ತದೆ, ಎಫೆಸದವರ ಧೈರ್ಯವು ನಿನಗೆ ಅಗತ್ಯವಿದೆ; ನಿಮ್ಮ ಸಹೋದರರರ ಮುಂದೆ ಬಂದು (ನಿಮ್ಮ) ತಪ್ಪುಗಳನ್ನು ಒಪ್ಪಿಕೊಂಡು ಅರಿಕೆ ಮಾಡಿರಿ (ಅಪೊಸ್ತಲರ ಕೃತ್ಯಗಳು 19:18; 8:24[54]; ಯಾಕೋಬ 5:16)!

---

ಟಿಪ್ಪಣಿಗಳು

[1]*American Heritage Electronic Dictionary,* 3d ed. (1992), s.v. "occult." [2]Gary Wilburn, "Preface," *The Fortune Sellers* (Glendale, Calif.: Gospel Light Publications, 1972), n.p. [3]"Cozenage" ನಿಗೂಢ ಮೋಸ. [4]ಮಾಟಗಾರರು ತಮ್ಮ ಕ್ರಿಯೆಗಳಲ್ಲಿ ಮೋಸತನವನ್ನು ಬಳಸುತ್ತಾನೆ. ಮಾಟಗಾರ ಎಂಬ ಪದವು "ಮತ" ಎಂಬ ಪದದ ಪರ್ಯಾಯ ಪದವಾಗಿದೆ. "ಮಾಟಗಾರ ಎಂಬ ಪದಕ್ಕೆ ಈ ಗೂಢಾರ್ಥ ಇನ್ನಿಲ್ಲ." [5]Shakespeare, *The Comedy of Errors*, 1.2.97-102. [6](17:2, 3) ಥೆಸಲೋನಿಕದ ಮೂರು ವಾರಗಳನ್ನು ಹೋಲಿಸಿ. [7]ದೇವಭಯ ಹೊಂದಿದವರೊಂದಿಗೆ ಯಶಸ್ವಿಯನ್ನು ಹೊಂದಿದ್ದನು, ಆದ್ದರಿಂದ ಯೆಹೂದ್ಯರು ಬೇಗನೆ ಕೋಪಗೊಂಡರು. [8]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ಅಪೊಸ್ತಲರ ಕೃತ್ಯಗಳು 1:3 ಟಿಪ್ಪಣಿಯನ್ನು ನೋಡಿರಿ. [9]"ಕೆಲವು ಅನುವಾದದಲ್ಲಿ "ಅಪನಂಬಿಕೆ" ಎಂದಿದೆ ಗ್ರೀಕ್ "ಅವಿಧೇಯತೆ" ನಂಬಿಕೆ ವಿಧೇಯತೆ ಸಂಗಡ ಹೋಗುತ್ತದೆ. [10]"ಸಮೂಹ" ಅಂದರೆ ಧಾರ್ಮಿಕ ಗುಂಪು.

[11]ಆಮೇರಿಕೆಯಲ್ಲಿ ಪ್ರಸಂಗಿಗಳು ಶಾಲಾ ಮನೆಗಳಲ್ಲಿ ಪ್ರಾರ್ಥನೆಯನ್ನು ಆರಂಭಿಸಿ ಸಭೆಗಳನ್ನು ಸ್ಥಾಪಿಸಿದರು. [12]"ವಿರಾಮ" ಎಂಬುದಕ್ಕೆ ಶಾಲೆ ಎಂದು ಗ್ರೀಕ್ ಅನುವಾದ. ತುರನ್ನನ ಶಾಲೆ ವ್ಯಾಯಾಮ ಶಾಲೆಯು ಆಗಿರಬಹುದೆಂಬ ಶಂಕೆಯಿದೆ. ಅದರಲ್ಲಿ ದೇಹ ಮತ್ತು ಮನಸ್ಸಿಗೆ ವ್ಯಾಯಾಮವಾಗುತ್ತಿತ್ತು. [13]ತುರನ್ನನ್ನು ಕ್ರೈಸ್ತನಾಗಿದ್ದರಿಂದ ಪೌಲನಿಗೆ ಆ ಶಾಲೆಯನ್ನು ಪುಕ್ಕಟೆಯಾಗಿ ನೀಡಿರುವ ಸಾಧ್ಯತೆಯಿದೆ. [14]ಪ್ರೀತಿಯ ದೆಸೆಯಿಂದ ಜನರು ಅಡ್ಡ ಹೆಸರುಗಳನ್ನು ಕರೆಯುವರು. [15]ಇದು ಪೂರ್ಣವಾದ ಅನುವಾದ ಎಂಬುದು ವಿದ್ವಾಂಸರ ವಿಚಾರವಾಗಿದೆ. [16]1 ಗಂಟೆಯ ಸಮಯದಲ್ಲಿ ಹೆಚ್ಚಾದ ಜನರು ನಿದ್ರಿಸಿರುವರು ಎಂಬ ಪುರಾತನ ಹೇಳಿಕೆ. (Referred to by F. F. Bruce, *The Book of Acts,* rev. ed. [Grand Rapids, Mich.: Wm. B Eerdmans Publishing Co., 1988], 366.) [17]ಪೌಲನ ಮೂರನೆ ಪ್ರಯಾಣದ ನಕ್ಷೆ ನೋಡಿರಿ. [18]ತುಖಿಕನು ಮತ್ತು ತ್ರೊಫಿಮಸನು ಆಸ್ಯ ಸೀಮೆಯವರಾಗಿದ್ದು, ನಂತರ ಪೌಲನೊಂದಿಗೆ ಪ್ರಯಾಣ ಮಾಡಿ ಸೇವೆ ಸಲ್ಲಿಸಿದರು (ಅಪೊಸ್ತಲರ ಕೃತ್ಯಗಳು 20:4). ಅವರೂ ಸಹ ಪೌಲನಿಂದ ಪರಿವರ್ತನೆಗೊಂಡು, ತರಬೇತಿ ಪಡೆದಿರಬಹುದು. [19]ಎಫಪ್ರನು ಪೌಲನೊಂದಿಗೆ ಪ್ರಯಾಣಿಸಿದ್ದನು, ರೋಮಾಯದಲ್ಲಿ ಪೌಲನೊಂದಿಗೆ ಇದ್ದನು (ಕೊಲೊಸ್ಸೆ 4:12, 13). ಅವನನ್ನು "ಜೊತೆ ಸೆರೆವಾಸಿ" ಎಂದು ಕರೆಯಲಾಗಿದೆ (ಫಿಲೆಮೋನ 23). [20]ಅಸ್ವಸ್ಥತೆಗೂ - ದೆವ್ವ ಪೀಡಿತಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಲೂಕನು ತಿಳಿಸಿರುವನು.

[21]Bruce, 366. [22]William Barclay, *The Acts of the Apostles,* The Daily Study Bible Series, rev. ed. (Philadelphia: Westminster Press, 1976), 142. [23]ಯೇಸುವಿನ ವಸ್ತ್ರಗಳನ್ನು ಮುಟ್ಟಿದಾಗ "ಆಸಾಧರಣ ಅದ್ಭುತಗಳು" ಉಂಟಾದವು ಎಂಬದನ್ನು ನಮ್ಮ ಜ್ಞಾಪಕಕ್ಕೆ ತರುತ್ತವೆ (ಮಾರ್ಕ 5:25-29; 6:56). [24]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ 4:6ರ ಮೇಲಿರುವ ಟಿಪ್ಪಣಿಯನ್ನು ನೋಡಿರಿ. ಬಹುವಚನವಿರುವಾಗ ಮಾತ್ರ "ಮಹಾಯಾಜಕ" ಎಂಬುದನ್ನು ಗ್ರೀಕ್‌ನಲ್ಲಿ "ಮಹಾಯಾಜಕರು" ಎನ್ನಲಾಗಿದೆ. (ಮತ್ತಾಯ 2:4). ಇಲ್ಲಿ ಏಕ ವಚನದಲ್ಲಿದೆ ಅದನ್ನು "ಮುಖ್ಯ ಯಾಜಕ" ಎನ್ನಲಾಗಿದೆ (ಅಪೊಸ್ತಲರ ಕೃತ್ಯಗಳು 4:6). KJVಯಲ್ಲಿ "ಮಹಾಯಾಜಕ" ಆದಾಗ್ಯೂ

ಸ್ಕೇವ ಎಂಬ ಯಾಜಕರಿರಲಿಲ್ಲ, NASB "ಮುಖ್ಯ ಯಾಜಕ." [25]Bruce, 368. [26]"ಏಳನೇ ಮಗಳ, ಏಳನೇ ಮಗಳು" ಭವಿಷ್ಯವಾಣಿಯನ್ನು ಹೊಂದಿರಬಹುದು. [27]ಗ್ರೀಕ್ ಪದದಿಂದ, ವಚನ 13ರನ್ನು "ಪ್ರಮಾಣ ಮಾಡಿಸು" ನಾನು ಅದನ್ನು ಆಣೆ ಮಾಡಿ ಹೇಳು ತ್ತೇನೆ ಎಂಬುದೆ. [28]ಈ ಯೆಹೂದ್ಯರು ದೆವ್ವಗಳನ್ನು ಬಿಡಿಸುತ್ತಿದ್ದರು ಎಂಬುದು ನಿರ್ಣಾಯಕವಲ್ಲ. ಯೇಸುವಿನ ವಿರೋಧಿಗಳು, ಯೆಹೂದ್ಯರು ಸಹ ದೆವ್ವ ಬಿಡಿಸಬಹುದು ಎಂದು ತಿಳಿದಿದ್ದರು (ಮತ್ತಾಯ 12 ಮತ್ತು ಲೂಕ 11). [29]"ನಾನು" ಆಣೆ ಮಾಡುತ್ತೇನೆ ಎಂಬ ನಾಮ ಪದವನ್ನು ಒಂದು ಸಾರಿ ತಿಳಿಸಲಾಗಿದೆ (ಮತ್ತಾಯ 26:63). [30]ಮತ್ತಾಯ 8:16; ಮಾರ್ಕ 5:8; 9:25; ಲೂಕ 4:35.

[31]ಕೆಲವು "ದೆವ್ವ ಬಿಡಿಸುವ" ಗುಂಪಿನವರ ಶಕ್ತಿಯು ದೇವರಿಂದ ಬಂದದ್ದಲ್ಲ, ಅದು ಮಧ್ಯಯುಗದ ಮೂಢನಂಬಿಕೆಯಾಗಿದೆ. [32]ಹೊಸ ಒಡಂಬಡಿಕೆಯ ಸಮಯದಲ್ಲಿ, ಒಳ್ಳೆಯ ಶಕ್ತಿಗಳು "ಮಹಾತ್ಕಾರ್ಯಗಳು" ಶಕ್ತಿಯನ್ನು ಮಾತ್ರ ಹೊಂದದೆ, ದುಷ್ಟ ಶಕ್ತಿಗಳು ಸಹ ಮಾಡಿದವು. ಮಹತ್ಕಾರ್ಯಗಳು ನಿಂತು ಹೋದಾಗ, ಅವರವರ ಶಕ್ತಿಗಳು ಇಲ್ಲವಾದವು "ಡೀಮನ್ಸ್, ಈ ವಿಲ್ ಸೂಪರ್ ನ್ಯಾಚುರಲ್" ಎಂಬ ಬರವಣಿಗೆಯನ್ನು ನೋಡಿರಿ, ಮತ್ತು "ಅಲೌಕಿಕ ಶಕ್ತಿಯ ಮೂರು ಪ್ರಾಯೋಜನೆಗಳನ್ನು" *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕವನ್ನು ನೋಡಿರಿ. [33]ಅವರನ್ನು ಮೋಸಗಾರನಾದ ಸಿಮೋನನ ಸಂಗಡ ಹೋಲಿಸಬೇಕು ಎಂದು ನಾನು ನಂಬುತ್ತೇನೆ (8:9-13). ಮತ್ತು ಬಾರ್ - ಯೇಸು (13:6-12). [34]ಲೌಕಿಕ ಬರಹಗಾರರು, ಹಾಗೂ ಪುರಾತನ ಹೇಳಿಕೆಯ ಪ್ರಕಾರ "ಯೇಸುವಿನ ನಾಮದಲ್ಲಿ ನಾನು ಆಣೆ ಇಡುತ್ತೇನೆ" ಎಂಬ ಮೂಲವನ್ನು ಹೊಂದಿರುತ್ತದೆ. ಇಬ್ರಿಯ ದೇವತೆ, "ಕೆಲವು ರೋಗಗಳನ್ನು ಗುಣಪಡಿಸಲು ಬಳಸುತ್ತಿದ್ದ ಪದಗಳು." [35]ಆ ವ್ಯಕ್ತಿಯಲ್ಲಿ ಇದ್ದ ಆತ್ಮವು ಮಾತನಾಡಿತು (ಮಾರ್ಕ 3:11). [36]ದೆವ್ವಗಳ ಶಕ್ತಿಗೆ ಮಿತಿಯಿದೆ *ಅಪೊಸ್ತಲರ ಕೃತ್ಯಗಳು, 3ನೇ* ಪುಸ್ತಕದ 16:17ರ ಟಿಪ್ಪಣಿ. [37]ಕೆಲವು ಅನುವಾದಗಳಲ್ಲಿ "ಅವೆರಡು" ಎಂಬುದಾಗಿದೆ, ಆ ಏಳು ಜನರಲ್ಲಿ ಇಬ್ಬರು ಮಾತ್ರ ಆ ಪ್ರಯೋಗ ಮಾಡಿದ್ದರು. ಗ್ರೀಕ್‌ನಲ್ಲಿ "ಅವರೆಲ್ಲರು" ಎಂಬುದಾಗಿದೆ. NASB ಯಲ್ಲಿ "ಇಬ್ಬರು" ಅಥವಾ ಇಬ್ಬರಿಗಿಂತ ಹೆಚ್ಚಿನವರು. [38]ಅಮೇರಿಕಾದ "ವನ್ನಚಿಸ್" ಅಂದರೆ (ಅದು, ಆ ವಿಧವಾಗಿ ಇರಲು). [39]ಗ್ರೀಕ್‌ನ "ಬೆತ್ತಲೆ" ಅಂದರೆ "ಬಟ್ಟೆ ಇಲ್ಲದಿರುವದು" ಎಂಬುದಾಗಿರುವದಿಲ್ಲ (ಸಾಕಷ್ಟು ಬಟ್ಟೆಯಿಲ್ಲ), ಆ ಏಳು ಜನರು ತನ್ನ ಗೌರವವನ್ನು ಮಾತ್ರವಲ್ಲದೆ, ತಮ್ಮ ವಿನಯತೆಯನ್ನೂ ಕಳಕೊಂಡರು. [40]Bruce, 368.

[41]ಈ ಸಭೆಗೆ ಅನ್ಯರೂ ಸಹ ಬರಬಹುದೆಂದು ಹಿನ್ನೆಲೆಯನ್ನು ವಾಕ್ಯ ನೀಡುತ್ತದೆ, ಇದನ್ನು ಹೊರತು ಪಡಿಸಿ ಹಾಗೆ, ಎಲ್ಲಿ ಎಂಬ ವಿವರವನ್ನು ನೀಡಿರುವದಿಲ್ಲ. [42]NASB ಯಲ್ಲಿ ಪೂರ್ಣವಾದ ಕಾಲಗಳನ್ನು ಬಿಂಬಿಸಿರುವದಿಲ್ಲ. [43]ತಮಾಷೆಗಾಗಿ ಮಾಡುವ ಮೋಡಿ ಸಹ ಅಲೌಕಿಕ ಮೂಲವನ್ನು ನಿರಾಕರಿಸುತ್ತದೆ, ಅದರ "ರಹಸ್ಯವನ್ನು" ಮುಚ್ಚಿಡಲು ಪ್ರಯತ್ನಿಸಲಾಗಿದೆ, ಅದನ್ನು ಹೇಗೆ ಮಾಡುವದು ಎಂಬ ಕೈ ಚಳಕದಲ್ಲಿ ಅವಲಂಭಿಸದೆ, "ಯಾವ ಮೂಲದಿಂದ ಮಾಡಲಾಗಿದೆ" ಎಂಬುದರಲ್ಲಿ ಅವಲಂಭಿತ ಕೊಂಡಿದೆ. ಹಣಕ್ಕಾಗಿ ಪಡಕ್ಕಾಗಿ ಪಡಕೊಂಡ ಮೋಡಿಯು ಹಿಂದಿರುಗಿಸಲಾಗುವದಿಲ್ಲ "ಯಾಕೆಂದರೆ ಈಗ ಆ ರಹಸ್ಯವು ಬಯಲಾಗಿದೆ." ಅದನ್ನು ಮಾಡಿದರೆ, ಆ ವ್ಯಕ್ತಿಯನ್ನು ಅವರ ಸಮಾಜವು ತಿಸ್ಕರಿಸುವುದು. [44]ಅನೇಕ ಕ್ರೈಸ್ತರು ಹಾಗೂ ಕ್ರೈಸ್ತರಲ್ಲದವರು ಮೋಡಿ ವಿಧ್ಯೆಯನ್ನು ಕಲಿತ್ತಿದ್ದರು. [45]NIV ನೋಡಿರಿ. [46]ಲೂಕನ 5ನೇ ವ್ಯಾಖ್ಯಾನ. [47]ಅಹುಜ ಹಲಗೆಗಳನ್ನು ಮಿಲ್ಟನ್ ಬ್ರಾಡ್ಲೆ ಗೇಮ್ ಕಂಪನಿಯು ಮಾರಾಟಮಾಡುತ್ತದೆ. ಆದರೆ ಅದು ಆಟದ ಹಲಗೆಯಾಗಿರದೇ, ನಿಗೂಡ ಶಕ್ತಿಯ ಮೂಲವಾಗಿರುತ್ತದೆ. [48]ಸ್ಥಳೀಯ ನಿಗೂಡ ಶಕ್ತಿಗಳ ಬಗ್ಗೆ ಹೇಳಬಹುದು. [49]ಇದು ಅಪೊಸ್ತಲರಿಗೆ ನೀಡಲಾದ ವಾಗ್ದಾನ, ಅದು ನಮಗಾಗಿ ಇರುವದಿಲ್ಲ; ಅಪೊಸ್ತಲರ ವಾಗ್ದಾನವನ್ನು 2 ಪೇತ್ರದಲ್ಲಿ ಯೇಸುತಾನೇ ಈಡೇರಿಸಿದನು. [50]Rick Atchley, "Get the Devil Out of the Way," Sermon preached at Southern Hills church of Christ, Abilene, Texas, on 1 January 1986.

[51]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ಈ 5:3ರ ಟಿಪ್ಪಣಿ ನೋಡಿರಿ. [52]ಪ್ರತ್ಯೇಕವಾದ ಗುಂಪುಗಳಿಗೆ ಇದನ್ನು ವ್ಯಕ್ತಿಗತ ಮಾಡಬೇಕು. [53]ಎಫೆಸದವರು ಇನ್ನೂ ನಿಗೂಡ ಕಾರ್ಯಗಳಲ್ಲಿ ತಲ್ಲಿನರಾಗಿರಲಿಲ್ಲ ಎಂಬ ಬರಹವಿದೆ. ಅವರು ತಮ್ಮ ಪುಸ್ತಗಳನ್ನು ಹೊರಹಾಕಿ, ತಪ್ಪುಗಳನ್ನು ಒಪ್ಪಿಕೊಂಡಿರಲಿಲ್ಲ, ಆದ್ದರಿಂದ ಅವರು ಪ್ರಪಂಚಕ್ಕೆ ಅಂಟಿಕೊಂಡಿದ್ದರು ಎಂಬ ಹೇಳಿಕೆಯಿದೆ. [54]*ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದಲ್ಲಿ ಈ 8:24ರ ಟಿಪ್ಪಣಿ ನೋಡಿರಿ.